# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಮಂಗಳವಾರ, ಜನವರಿ 14, 2025

ಸಂಪುಟ : 51 ಸಂಚಿಕೆ : 242 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com






## ವಿಶ್ವದ ಅತಿದೊಡ್ಡ ಧಾರ್ಮಿಕ ಕುಂಭ ಮೇಳಕ್ಕೆ ವಿಧ್ಯುಕ್ತ ಚಾಲನೆ

ಪ್ರಯಾಗ್‌ರಾಜ್, ಜ.13- ವಿಶ್ವದ ಅತಿದೊಡ್ಡ ಧಾರ್ಮಿಕ ಮೇಳ ಮಹಾ ಕುಂಭಮೇಳ ಪ್ರಯಾಗ್‌ರಾಜ್‌ನಲ್ಲಿ ಆರಂಭವಾಗಿದೆ.

ಲಕ್ಷಾಂತರ ನಾಗ ಸಾಧುಗಳು ಪವಿತ್ರ ಸ್ನಾನ ಮಾಡುವ ಮೂಲಕ ಮಹಾಕುಂಭ ಮೇಳಕ್ಕೆ ವಿಧ್ಯುಕ್ತ ಚಾಲನೆ ನೀಡಲಾಗಿದೆ.

ಫೆಬ್ರವರಿ 26ರ ಮಹಾ ಶಿವರಾತ್ರಿವರೆಗೂ ಮಹಾಕುಂಭ ಮೇಳ ನಡೆಯಲಿದ್ದು, 40 ಕೋಟಿಗೂ ಅಧಿಕ ಜನರು ಭಾಗಿಯಾಗುವ ನಿರೀಕ್ಷೆಯಿದೆ.

ಗಂಗಾ, ಯಮುನಾ, ಸರಸ್ವತಿ ನದಿಗಳ ಸಂಗಮದಲ್ಲಿ ಪುಣ್ಯ ಸ್ನಾನ ನಡೆಯಲಿದ್ದು, ಉತ್ತರ ಪ್ರದೇಶ ಸರ್ಕಾರದಿಂದ ಸಂಪೂರ್ಣ ತಯಾರಿ ನಡೆದಿದೆ. ಇಲ್ಲಿಯವರೆಗೆ, 40 ಲಕ್ಷಕ್ಕೂ ಹೆಚ್ಚು ಜನರು ನದಿಯಲ್ಲಿ ಸ್ನಾನ ಮಾಡಿದ್ದಾರೆ ಎಂದು ಮಹಾ ಕುಂಭಮೇಳದ ಅಧಿಕಾರಿ ವಿಜಯ್ ಕಿರಣ್ ಆನಂದ್ ಅವರು ತಿಳಿಸಿದ್ದಾರೆ.

**ಈ ಹಿಂದೆ 2013ರಲ್ಲಿ ಮಹಾ ಕುಂಭಮೇಳ ನಡೆದಿತ್ತು. ಇದೀಗ 2025ರ ಜ.13ರಿಂದ ಆರಂಭವಾಗಿದೆ. ಫೆ.26ರ ಶಿವರಾತ್ರಿ ದಿನದಂದು ಈ ಕುಂಭಮೇಳ ಸಂಪನ್ನಗೊಳ್ಳಲಿದೆ. ಜ.14ರಂದು ಮಕರ ಸಂಕ್ರಾಂತಿ, ವಸಂತ, ಪಂಚಮಿ, ಹೀಗೆ 5 ಬಾರಿ ಪುಣ್ಯಸ್ನಾನ ಪ್ರಯಾಗ್‌ರಾಜ್‌ನಲ್ಲಿರುವ ತ್ರಿವೇಣಿ ಸಂಗಮದಲ್ಲಿ ನಡೆಯಲಿದೆ.**

ಶನಿವಾರ ಸಂಗಮದಲ್ಲಿ ಸ್ನಾನ ಮಾಡಲು 33 ಲಕ್ಷ ಭಕ್ತರು ಭೇಟಿ ನೀಡಿದ್ದರು. ಕಳೆದ ಎರಡು ದಿನಗಳಲ್ಲಿ 85 ಲಕ್ಷಕ್ಕೂ ಹೆಚ್ಚು ಜನರು ನದಿಯಲ್ಲಿ ಸ್ನಾನ ಮಾಡಿದ್ದಾರೆಂದು ಮಾಹಿತಿ ನೀಡಿದ್ದಾರೆ.

ಮಹಾಕುಂಭ ಮೇಳದಲ್ಲಿ ಆರು ಶಾಹಿ ಸ್ನಾನ ನಡೆಯಲಿದೆ. ಪುಣ್ಯಸ್ನಾನಕ್ಕೆ ಸರ್ಕಾರದಿಂದ ಸಕಲ ವ್ಯವಸ್ಥೆಯಾಗಿದೆ. ಅವಘಡಗಳು ನಡೆಯದಂತೆ ಸರ್ಕಾರ ಎಚ್ಚರಿಕೆ ವಹಿಸಿದೆ.

ನದಿಯ ಉದ್ದಕ್ಕೂ 12 ಕಿಲೋ ಮೀಟರ್ ಘಾಟ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಇದೇ ಮೊದಲ ಬಾರಿಗೆ ಎನ್‌ಡಿಆರ್‌ಎಫ್ ಪಡೆಯಿಂದ ನೀರಿನ ಮೇಲೆ ಅಂಬ್ಯುಲೆನ್ಸ್ ನಿರ್ಮಾಣ ಮಾಡಲಾಗಿದೆ. ಐಸಿಯು ಸೌಲಭ್ಯ ಹೊಂದಿರುವ ಅಂಬ್ಯುಲೆನ್ಸ್‌ಗಳನ್ನು ನದಿ ನೀರಿನ ಮೇಲೆ ನಿಲ್ಲಿಸಲಾಗಿದೆ.

ಅಂಬ್ಯುಲೆನ್ಸ್‌ಗಳಲ್ಲಿ ವೈದ್ಯಕೀಯ ಸಿಬ್ಬಂದಿ ಮತ್ತು ಹಾಸಿಗೆಗಳ ಜೊತೆಗೆ ಆಮ್ಲಜನಕ ಮತ್ತು ವೆಂಟಿಲೇಟರ್‌ಗಳ ಸೌಲಭ್ಯ ಕಲ್ಪಿಸಲಾಗಿದೆ.

ನದಿಯಲ್ಲಿ ಸ್ನಾನ ಮಾಡುವವರ ಸುರಕ್ಷತೆಗಾಗಿ 800 ಪ್ರಾದೇಶಿಕ ಸಶಸ್ತ್ರ ಕಾನ್ಸ್‌ಟೇಬಲ್, 150 ಎಸ್‌ಡಿಆರ್‌ಎಫ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಪ್ರತಿ 12 ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳ ಈ ಬಾರಿ ಅತೀ ವಿಶೇಷವಾಗಿದೆ. ಏಕೆಂದರೆ ಪ್ರಯಾಗ್ ರಾಜ್‌ನಲ್ಲಿ ಮಹಾ ಕುಂಭಮೇಳ ನಡೆಯುತ್ತಿದ್ದರೆ, ಸಮೀಪದಲ್ಲೇ ಇರುವ ಅಯೋಧ್ಯೆಯಲ್ಲಿ ಮೊದಲ ವಾರ್ಷಿಕೋತ್ಸವ ಸಂಭ್ರಮ ನಡೆಯುತ್ತಿದೆ. ಈ ಮಹಾ ಕುಂಭಮೇಳಕ್ಕೆ **(4ನೇ ಪುಟಕ್ಕೆ)**

## ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕತ್ವ ಬದಲಾವಣೆ ಇಲ್ಲ: ಸಿಎಂ

ಬೆಂಗಳೂರು, ಜ.13- ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕತ್ವ ಬದಲಾವಣೆ ಪ್ರಸ್ತಾಪವೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಬದಲಾವಣೆ ಆಗುತ್ತಾರೆ ಎಂಬ ಮಾಧ್ಯಮಗಳ ವರದಿಗೆ ಕಿಡಿಕಾರಿದ ಸಿದ್ದರಾಮಯ್ಯ, ಕುರ್ಚಿಯೇ ಖಾಲಿ ಇಲ್ಲದಿರುವಾಗ ಹೊಸ ಮುಖ್ಯಮಂತ್ರಿಯನ್ನು ಎಲ್ಲಿ ಕೂರಿಸುತ್ತೀರಿ? ಎಂದು ಪ್ರಶ್ನಿಸಿದರು.

ಪಕ್ಷ ಮತ್ತು ಆಡಳಿತದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ, ನಾವು ಒಟ್ಟಾಗಿ ಹೋಗುತ್ತಿರುವುದನ್ನು ಸಹಿಸಲಾಗದೆ, ನೀವು ಇಂತಹ ಊಹಾಪೋಹಗಳನ್ನು ಹರಿಬಿಡುತ್ತಿದ್ದೀರಿ ಎಂದು ಸುದ್ದಿಗಾರರ ಮೇಲೆ ಹರಿಹಾಯ್ದರು. ಊಹಾಪೋಹಗಳನ್ನು ಹರಡುವ ಬದಲು ಸತ್ಯವನ್ನು ಹೇಳಿ, ನಿಮ್ಮ ಟಿಆರ್‌ಪಿಗಾಗಿ ನಾಯಕತ್ವ ಬದಲಾವಣೆ ವಿಚಾರ ಮುಂದಿಡುತ್ತಿದ್ದೀರಿ ಎಂದು ಟೀಕಿಸಿದರು. ಸರ್ಕಾರ ಯಾವುದೇ ತೀರ್ಮಾನ ಕೈಗೊಳ್ಳುವ ಮುನ್ನ ಪಕ್ಷವನ್ನು **(2ನೇ ಪುಟಕ್ಕೆ)**

## ರೂಪಾಯಿ ಮೌಲ್ಯ ಸಾರ್ವಕಾಲಿಕ ಕುಸಿತ

ಮುಂಬೈ, ಜ. 13- ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರದ ಆರಂಭಿಕ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸಾರ್ವಕಾಲಿಕ ಕುಸಿತ ಕಂಡಿದೆ.

ರೂಪಾಯಿ ಮೌಲ್ಯ 23 ಪೈಸೆ ಇಳಿಕೆಯಾಗಿದ್ದು, ಪ್ರತೀ ಡಾಲರ್ ಮೌಲ್ಯವು ಮೊದಲ ಬಾರಿಗೆ 86.27ರೂ.ಗೆ ತಲುಪಿದೆ.

ದೇಶದ ಇಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳದ ಹೊರಹರಿವು ಮುಂದುವರೆದಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗುತ್ತಿದೆ. ಅಮೆರಿಕದ ಬಾಂಡ್‌ಗಳ ಗಳಿಕೆಯಲ್ಲಿ ಹೆಚ್ಚಳವಾಗಿದೆ. ದೇಶೀಯ ಸೂಚ್ಯಂಕಗಳ ಇಳಿಕೆಯಿಂದಾಗಿ ರೂಪಾಯಿ ಮೇಲೆ ಒತ್ತಡ ಸೃಷ್ಟಿಯಾಗಿದೆ. ಇದರಿಂದ ರೂಪಾಯಿ ಮೌಲ್ಯ ಕುಸಿತದ ಹಾದಿ ಹಿಡಿದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

## ಕುಂಭಮೇಳದಲ್ಲಿ 'ನಂದಿನಿ ಚಾಯ್'

ಬೆಂಗಳೂರು, ಜ.13- ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯಲಿರುವ ಮಹಾಕುಂಭ ಮೇಳದಲ್ಲಿ ಚಹಾ ವಿತರಿಸಲು 'ಚಾಯ್ ಪಾಯಿಂಟ್'ನೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಕೆ.ಎಂ.ಎಫ್ ತಿಳಿಸಿದೆ. ಚಹಾದ ಜೊತೆಗೆ ನಂದಿನಿಯ ಇತರೆ ಉತ್ಪನ್ನಗಳಾದ ಸಿಹಿತಿಂಡಿ ಹಾಗೂ ಮಿಲ್ಕ್‌ಶೇಕ್‌ಗಳನ್ನು ಮಾರಾಟ **(2ನೇ ಪುಟಕ್ಕೆ)**

## ಹಸುಗಳ ಕೆಚ್ಚಲು ಕೊಯ್ದವನ ಬಂಧನ

### ಶೇಖ ನಸ್ರೂ ಬಂಧಿತ, ಆರೋಪಿ ನ್ಯಾಯಾಂಗ ಬಂಧನಕ್ಕೆ

ಬೆಂಗಳೂರು, ಜ.13- ಚಾಮರಾಜಪೇಟೆಯಲ್ಲಿ 3 ಹಸುಗಳ ಕೆಚ್ಚಲು ಕೊಯ್ದು, ಮಚ್ಚಿನಿಂದ ಕಾಲಿಗೆ ಹೊಡೆದಿದ್ದ ಆರೋಪಿಯನ್ನು ಕಾಟನ್ ಪೇಟೆ ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಶೇಖ್ ನಸ್ರೂ (35) ಬಂಧಿತ ಆರೋಪಿ. ಚಾಮರಾಜಪೇಟೆಯ ವಿನಾಯಕ ನಗರದ ಓಲ್ಡ್ ಪೆನ್ಷನ್ ಮೊಹಲ್ಲಾದ ರಸ್ತೆ ಬದಿಯ ಶೆಡ್‌ನಲ್ಲಿ ಭಾನುವಾರ ಬೆಳಿಗ್ಗೆ ಘಟನೆ ನಡೆದಿತ್ತು.

ಬಿಎನ್‌ಎಸ್ ಸೆಕ್ಷನ್ 325 ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿ ಒಬ್ಬನೇ ಕೃತ್ಯ ಎಸಗಿದ್ದಾನೆ. ಬೇರೆ ಯಾರೂ ಭಾಗಿ ಆಗಿಲ್ಲ. ಆದರೂ ತನಿಖೆ ಮುಂದುವರೆಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಕೃತ್ಯ ನಡೆದ ಸ್ಥಳದಿಂದ ಸುಮಾರು 50 ಮೀಟರ್‌ನಷ್ಟು ದೂರ ಇರುವ ಪ್ಲಾಸ್ಟಿಕ್ ಹಾಗೂ ಬ್ಯಾಗ್ ಹೊಲಿಯುವ ಅಂಗಡಿಯಲ್ಲಿ ಆರೋಪಿ ಕೆಲಸ ಮಾಡುತ್ತಿದ್ದ. ಮದ್ಯದ ನಶೆಯಲ್ಲಿ ಹಸುಗಳ ಕೆಚ್ಚಲು ಕೊಯ್ದಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

ಆರೋಪಿಯನ್ನು ನ್ಯಾಯಾಧೀಶರ ಎದುರು ಹಾಜರು ಪಡಿಸಲಾಗಿದ್ದು, ಜನವರಿ 24ರ ತನಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಆರೋಪಿಯನ್ನು ಪರಪ್ಪನ ಅಗ್ರಹಾರ **(2ನೇ ಪುಟಕ್ಕೆ)**

## ಬಹಿರಂಗ ಹೇಳಿಕೆ, ಪ್ರತ್ಯೇಕ ಸಭೆ ಸಹಿಸಲ್ಲ

### ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಖಡಕ್ ಎಚ್ಚರಿಕೆ

ಬೆಂಗಳೂರು, ಜ. 13- ಕರ್ನಾಟಕದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ, ಈ ಬಗ್ಗೆ ಬಹಿರಂಗವಾಗಿ ಮಾತನಾಡುವುದು ಹಾಗೂ ಪ್ರತ್ಯೇಕ ಸಭೆಗಳನ್ನು ನಡೆಸುವುದನ್ನು ಪಕ್ಷ ಸಹಿಸುವುದಿಲ್ಲ ಎಂದು ಕಾಂಗ್ರೆಸ್ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಇಂದಿಲ್ಲಿ ಖಡಕ್ ಎಚ್ಚರಿಕೆ ನೀಡಿದ್ದಾರೆ.

ರಾಜಕೀಯ ನಿರ್ಧಾರಗಳನ್ನು ವರಿಷ್ಠರು ಕಾಲಾನುಕಾಲಕ್ಕೆ ತೆಗೆದುಕೊಳ್ಳುತ್ತಾರೆ, ಯಾವ ಸಮಯದಲ್ಲಿ ಏನು ನಿರ್ಧಾರ ಕೈಗೊಳ್ಳಬೇಕೆಂಬುದು ಅವರಿಗೆ ಗೊತ್ತಿದೆ, ನೀವು ಸಭೆಗಳನ್ನು



ನಡೆಸಿ, ನಾಯಕರನ್ನು ಸೃಷ್ಟಿ ಮಾಡಿದರೆ ಅದಕ್ಕೆ ಯಾವುದೇ ಕಿಮ್ಮತ್ತು ಇರುವುದಿಲ್ಲ ಎಂದಿದ್ದಾರೆ.

ಸಿದ್ದರಾಮಯ್ಯ ಅಧಿಕಾರದಿಂದ ಕೆಳಗಿಳಿಯುತ್ತಾರೆ, ಶಿವಕುಮಾರ್ ಆ ಸ್ಥಾನಕ್ಕೆ ಏರುತ್ತಾರೆ ಎಂಬ ಕಲ್ಪನೆಗಳೊಂದಿಗೆ ಸಭೆಗಳನ್ನು ಮಾಡಬೇಡಿ ಎಂದು ಸಚಿವರುಗಳನ್ನು ಎಚ್ಚರಿಸಿದ್ದಾರೆ.

ಆಡಳಿತ ಮತ್ತು ಸರ್ಕಾರದಲ್ಲಿ ನಾಯಕತ್ವ ಕುರಿತು ಎದ್ದಿರುವ ಗೊಂದಲ ಪರಿಹರಿಸಲು ರಾಜ್ಯಕ್ಕೆ ಆಗಮಿಸಿರುವ ಸುರ್ಜೇವಾಲಾ ಇಂದು ಬೆಳ್ಳಂಬೆಳಗ್ಗೆಯೇ ಆಯ್ದ ಸಚಿವರನ್ನು ತಾವು ಉಳಿದುಕೊಂಡಿದ್ದ ಪಂಚತಾರಾ ಹೋಟೆಲ್‌ಗೆ ಕರೆಸಿಕೊಂಡು ಖಡಕ್ ಸೂಚನೆ ನೀಡಿದ್ದಾರೆ.

ಜಾತಿ ಮತ್ತು ಗುಂಪುಗಳಿಗೆ ಪಕ್ಷ ಎಂದೂ ಮಣೆ ಹಾಕುವುದಿಲ್ಲ, ಆಡಳಿತ ನಡೆಸುವ ನೀವುಗಳು ಪ್ರತ್ಯೇಕ ಸಭೆ ಮತ್ತು ಔತಣಕೂಟಗಳನ್ನು ನಡೆಸಿದರೆ, ತಪ್ಪು ಸಂದೇಶ ಹೋಗುತ್ತದೆ. ನಿಮ್ಮ ಇಂತಹ ನಡವಳಿಕೆಗಳಿಂದ **(5ನೇ ಪುಟಕ್ಕೆ)**

## ಒಡಿಶಾ: ಎಮರ್ಜೆನ್ಸಿ ವೇಳೆ ಜೈಲಿನಲ್ಲಿದ್ದವರಿಗೆ 20 ಸಾವಿರ ರೂ. ಪಿಂಚಣಿ ಘೋಷಣೆ

ಭುವನೇಶ್ವರ, ಜ.13- ಒಡಿಶಾ ಸರ್ಕಾರವು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜೈಲಿನಲ್ಲಿದ್ದವರಿಗೆ ಮಾಸಿಕ 20 ಸಾವಿರ ಪಿಂಚಣಿ ಮತ್ತು ಇತರೆ ಸೌಲಭ್ಯಗಳನ್ನು ಘೋಷಿಸಿದೆ ಎಂದು ರಾಜ್ಯ ಗೃಹ ಇಲಾಖೆಯ ಅಧಿಸೂಚನೆಯಲ್ಲಿ ತಿಳಿಸಿದೆ.

ಆಂತರಿಕ ಭದ್ರತಾ ಕಾಯ್ದೆ ನಿರ್ವಹಣೆ ಅಡಿಯಲ್ಲಿ ತುರ್ತು ಪರಿಸ್ಥಿತಿ ವೇಳೆ ಜೈಲು ಪಾಲಾದವರಿಗೆ ಮಾಸಿಕ ಪಿಂಚಣಿ ನೀಡುವುದಾಗಿ ಜನವರಿ 2ರಂದು ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಘೋಷಿಸಿದ್ದರು.

ಪಿಂಚಣಿ ಜೊತೆಗೆ ಈ ವೇಳೆ ಜೈಲು ಪಾಲಾದ ಎಲ್ಲರ ವೈದ್ಯಕೀಯ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. 2025ರ ಜ.1ರವರೆಗೆ ಜೀವಂತವಾಗಿದ್ದವರಿಗೆ ಈ ಸೌಲಭ್ಯ ಸಿಗಲಿದೆ ಎಂದು ಅದು ಹೇಳಿದೆ.

1975ರ ಜೂನ್ 25 ರಿಂದ 1977 ಮಾರ್ಚ್ 21ರ ನಡುವೆ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಬೀದಿಗಿಳಿದಿದ್ದ ನೂರಾರು ಜನರನ್ನು ದೇಶ ವಿವಿಧ ಜೈಲುಗಳಲ್ಲಿ ಬಂಧಿಸಲಾಗಿತ್ತು.

## ತಿರುಮಲ ದೇವಾಲಯದಲ್ಲಿ ಪ್ರಸಾದ ಕೌಂಟರ್‌ನಲ್ಲಿ ಅಗ್ನಿ ಅವಘಡ



ತಿರುಪತಿ, ಜ.13- ಆಂಧ್ರಪ್ರದೇಶದ ತಿರುಪತಿ ತಿರುಮಲ ದೇವಾಲಯದ ಲಡ್ಡು ಪ್ರಸಾದ ನೀಡುತ್ತಿದ್ದ ಕೌಂಟರ್‌ನಲ್ಲಿ ಸೋಮವಾರ ಅಗ್ನಿ ಅವಘಡ ಸಂಭವಿಸಿದೆ. ಕಂಪ್ಯೂಟರ್‌ಗೆ ಹೊಂದಿಕೊಂಡಿದ್ದ ಯುಪಿಎಸ್ ನಲ್ಲಿ ಶಾರ್ಟ್ ಸರ್ಕೀಟ್ ಉಂಟಾದ ಕಾರಣ 47ನೇ ಕೌಂಟರ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣವೇ ಸಿಬ್ಬಂದಿ **(5ನೇ ಪುಟಕ್ಕೆ)**

## ಹಳ್ಳಿಗಳನ್ನು ಪಾನಮುಕ್ತಗೊಳಿಸಲು ಜನರ ಮನ:ಪರಿವರ್ತನೆ ಅಗತ್ಯ



**ಭಾರತೀಯ ಗ್ರಾಮೀಣ ಮಹಿಳಾ ಸಂಘದ ಕಾರ್ಯಕ್ರಮದಲ್ಲಿ ಎಸ್ಪಿ ಉಮಾ ಪ್ರಶಾಂತ್**

ದಾವಣಗೆರೆ, ಜ. 13 - ಮದ್ಯಪಾನದಿಂದ ಅಹಿತಕರ ಘಟನೆ ಹೆಚ್ಚಾಗುತ್ತಿದ್ದು, ಹಳ್ಳಿಗಳನ್ನು ಪಾನಮುಕ್ತಗೊಳಿಸಲು, ಜನರ ಮನಪರಿವರ್ತನೆ ಮಾಡುವಂತಹ ಕಾರ್ಯಕ್ರಮ ಹಮ್ಮಿಕೊಳ್ಳುವುದು ಅಗತ್ಯವಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ತಿಳಿಸಿದರು.

ನಗರದ ವನಿತಾ ಸಮಾಜದ ವತಿಯಿಂದ ವನಿತಾ ಸಮಾಜದ ಅಂಗ ಸಂಸ್ಥೆಯಾದ ಭಾರತೀಯ ಗ್ರಾಮೀಣ ಮಹಿಳಾ ಸಂಘದಿಂದ ಸತ್ಯ ಸಾಯಿ ರಂಗಮಂದಿರದಲ್ಲಿ ನೂತನ ವರ್ಷಕ್ಕೆ ಸಂಗೀತ ಸಂಜೆ ಮಧುರ ಗೀತೆಗಳ ಸಂಗಮ ಮತ್ತು ಕ್ಯಾಂಪ್ ಫೈಯರ್ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಅವರು ಮಾತನಾಡಿದರು.

ಮದ್ಯಪಾನದಿಂದಾಗುವ ದುಷ್ಪರಿಣಾಮ ಕುರಿತು ಜನಜಾಗೃತಿ ಅಗತ್ಯವಾಗಿದ್ದು, ಇಡೀ ರಾಜ್ಯವನ್ನೇ ಪಾನಮುಕ್ತಗೊಳಿಸುವ ಮೊದಲು ಅದನ್ನು ಒಂದು ಸಣ್ಣ ಗ್ರಾಮದಿಂದ ಪ್ರಾರಂಭ ಮಾಡುವುದು ಉತ್ತಮ. ಜನರ ಮನ ಪರಿವರ್ತನೆಯಾಗದ ಹೊರತು **(4ನೇ ಪುಟಕ್ಕೆ)**


**ಸವಿನೆನಪು**



ಲಿಂ॥ ಶ್ರೀಮತಿ ಪ್ರೇಮ ರಾಜಶೇಖರ್ ಮುದೇಗೌಡ್ರ

ನಿಧನ : 14.01.2013

ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತಿ : ಮುದೇಗೌಡ್ರ ರಾಜಶೇಖರ್
ಪುತ್ರಿ: ಶ್ರೀಮತಿ ನೀತಾ ವಿಕಾಸ್, ಅಳಿಯ : ಎಂ.ಎಸ್. ವಿಕಾಸ್
ಮೊಮ್ಮಕ್ಕಳು : ಎಂ.ವಿ. ಜಯಧರ, ಎಂ.ವಿ. ಪ್ರೇರಣ
ಹಾಗೂ ಮುದೇಗೌಡ್ರು ವಂಶಸ್ಥರು.



**ಡಾ. ಐ.ಎಸ್. ಪ್ರಶಾಂತ್ ಆರಾಧ್ಯ ನಿಧನ**



ದಾವಣಗೆರೆ ಸಿಟಿ ಎಂಸಿಸಿ 'ಎ' ಬ್ಲಾಕ್ ವಾಸಿ
ದಿ. ಐ.ಪಿ. ಸೋಮನಾಥ ಆರಾಧ್ಯ ರವರ ದ್ವಿತೀಯ ಪುತ್ರ

**ಡಾ. ಐ.ಎಸ್. ಪ್ರಶಾಂತ್ ಆರಾಧ್ಯ**

ಇವರು, ದಿನಾಂಕ : 13.01.2025ರ ಸೋಮವಾರ
ಬೆಳಿಗ್ಗೆ 8.30 ಗಂಟೆಗೆ ನಿಧನರಾದರು. ಮೃತರಿಗೆ 55 ವರ್ಷ ವಯಸ್ಸಾಗಿತ್ತು.
ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು
ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು
ದಿನಾಂಕ : 13.01.2025ರ ಸೋಮವಾರ ಸಂಜೆ 5.30ಕ್ಕೆ
ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ :
ಸಹೋದರ ಮತ್ತು ಸಹೋದರಿಯರು, ಆರಾಧ್ಯ ಕುಟುಂಬದವರು
ಹಾಗೂ ಬಂಧು-ಮಿತ್ರರು.

# ನಮ್ಮ ಜೊತೆ ಬರುವುದು ನಾವು ಕಲಿತ ವಿದ್ಯೆ ಮಾತ್ರ

## ಎಸ್‌ಜೆವಿಪಿ ಕಾಲೇಜಿನ ಕಾರ್ಯಕ್ರಮದಲ್ಲಿ ಶ್ರೀ ಉಜ್ಜಯಿನಿ ಜಗದ್ಗುರುಗಳು



ಹರಿಹರ, ಜ. 11 - ನಾವು ಗಳಿಸಿದ ಆಸ್ತಿ, ಅಧಿಕಾರ, ಸಂಪತ್ತು, ಸಂಪಾದನೆ ಒಂದು ದಿನ ನಮ್ಮಿಂದ ದೂರವಾಗಬಹುದು, ಆದರೆ ನಾವು ಕಲಿತಂತಹ ವಿದ್ಯೆ ಮಾತ್ರ ನಮ್ಮ ಜೊತೆಗೆ ಬರು ವಂತಹದ್ದು ಎಂದು ಶ್ರೀ ಉಜ್ಜಯಿನಿ ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿ ಅಭಿಪ್ರಾಯ ಪಟ್ಟರು.

ನಗರದ ಎಸ್.ಜೆ.ವಿ.ಪಿ ಕಾಲೇಜು ಸಭಾಂಗಣ ದಲ್ಲಿ ನಡೆದ ಎಂ.ಆರ್.ಬಿ ಪ್ರೌಢಶಾಲೆಯ 1992-93 ನೇ ಸಾಲಿನ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಗಳಿಸಿದ ಹಣ, ಆಸ್ತಿ, ಸಂಪತ್ತಿಗೆ ಕಳ್ಳ ಕಾಕರ ಭಯ ಕಾಣುತ್ತಿದ್ದೆವು. ಆದರೆ ಕಾಲ ಬದಲಾದಂತೆ ಈಗ ಇಡಿ ಮತ್ತು ಐಟಿ ಅಧಿಕಾರಿಗಳ ಭಯ ಕಾಣುತ್ತೇವೆ. ಆದರೆ ಕಲಿತಂತಹ ವಿದ್ಯೆಗೆ ಯಾವುದೇ ರೀತಿಯ ಭಯ ಇರುವುದಿಲ್ಲ ಮತ್ತು ಅದನ್ನು ಅಪಹರಣ ಮಾಡಲಿಕ್ಕೂ ಸಹ ಸಾಧ್ಯವಿಲ್ಲ. ಹಣದ ಮೂಟೆಯನ್ನು ಹೊತ್ತುಕೊಂಡು ಹೋಗುವ ಸಮಯದಲ್ಲಿ ದೂರ ಹೋದಂತೆ ಭಾರ ಆಗುತ್ತದೆ. ಆದರೆ ವಿದ್ಯೆ ಕಲಿತಂತೆಲ್ಲ ಭಾರ ಆಗದೇ ನಮ್ಮನ್ನು ಎತ್ತರದ ಸ್ಥಾನಕ್ಕೆ ತೆಗೆದುಕೊಂಡು ಹೋಗುವಂತಹ ಶಕ್ತಿಯನ್ನು ಹೊಂದಿದೆ ಎಂದರು.

ಶಿಕ್ಷಕರಾದವರು ವಿದ್ಯಾರ್ಥಿಗಳಿಗೆ ಕೇವಲ ಪಾಠ ಮಾಡುವುದಷ್ಟೇ ಅಲ್ಲದೆ ಅವರಲ್ಲಿ ಇರುವಂತಹ ಪ್ರತಿಭೆಯನ್ನು ಹೆಕ್ಕಿ ಹೊರ ತೆಗೆಯಬೇಕು. ಜಗತ್ತಿನಲ್ಲಿ ಜ್ಞಾನ ಸಂಪತ್ತು ಬಹಳ ದೊಡ್ಡದು, ಅನ್ನದಿಂದ ಶರೀರದ ಆಕಾರ ದೊಡ್ಡದಾಗುತ್ತದೆ. ಆದರೆ ವಿದ್ಯೆಯಿಂದ ಬುದ್ಧಿಯ ವಿಕಾಸ ಆಗುತ್ತದೆ. ತಂದೆ, ತಾಯಿ ತಮ್ಮ ಮಕ್ಕಳಿಗೆ ಜನ್ಮ ನೀಡಿ ಅನ್ನವನ್ನು ಹಾಕಬಹುದು. ಆದರೆ ಸಾರ್ಥಕತೆಯ ಬದುಕಿಗೆ ಬೇಕಾದಂತಹ ಎಲ್ಲಾ ಅಗತ್ಯತೆಗಳನ್ನು ಪೂರೈಸುವಂತಹ ವಿದ್ಯೆ, ಬುದ್ಧಿ ಯನ್ನು ಶಿಕ್ಷಕರು ನೀಡುತ್ತಾರೆ. ಹಾಗಾಗಿ ಅವರನ್ನು ಇಲ್ಲಿ ಸನ್ಮಾನಿಸಿ, ಗೌರವಿಸಿದ್ದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹೇಳಿದರು.

ಎಸ್.ಜೆ.ವಿ.ಪಿ ಕಾಲೇಜು ಆಡಳಿತ ಮಂಡಳಿಯ ಉಪಾಧ್ಯಕ್ಷ ಡಿ.ಎಂ. ಹಾಲಸ್ವಾಮಿ ಮಾತನಾಡಿ, ಈ ಕಾಲೇಜಿನಲ್ಲಿ ಓದಿರುವಂತಹ ಹಳೆಯ ವಿದ್ಯಾರ್ಥಿಗಳು ಶಿಕ್ಷಕರನ್ನು ಸನ್ಮಾನಿಸಿ ಗೌರವಿಸುವಂತಹ ಕೆಲಸವನ್ನು ಮಾಡಿದ್ದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹೇಳಿದರು.

ಇದೇ ವೇಳೆ ನಿವೃತ್ತ ಮುಖ್ಯೋಪಾಧ್ಯಾಯ ಜಿ.ಎಸ್. ಹಿರೇಮಠ್, ನಿವೃತ್ತ ಶಿಕ್ಷಕರಾದ ಎನ್.ಎ. ಹಿರೇಮಠ್, ಎನ್. ಗಂಗಾಧರ್, ಪಿ.ಕೆ. ಎಸ್.ಬಿ. ಹಿರೇಮಠ್, ಅನಸೂಯಮ್ಮ, ಹೆಚ್.ಕೊಟ್ರೇಶಪ್ಪ, ಟಿ.ಕೆ. ಪ್ರಭುಸ್ವಾಮಿ, ಎಸ್.ಟಿ. ಹಿರೇಮಠ್, ಎನ್.ಎಂ.ಕೆ. ರಾಜು ಹಾಗೂ ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ ಮತ್ತಿತರರನ್ನು ಸನ್ಮಾನಿಸಲಾಯಿತು.

ಕಾಲೇಜಿನ ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ಮತ್ತು ದಾವಣಗೆರೆ ವಿವಿ ಸಿಂಡಿಕೇಟ್ ಸದಸ್ಯ ಆರ್.ಟಿ. ಪ್ರಶಾಂತ್, ಸುರೇಶ್ ಸಕ್ರಿ, ಜೆ.ಎಂ. ನಾಗರಾಜ್, ಕರಿಬಸಪ್ಪ, ಉಮೇಶ್, ಸುಧೀರ್, ರೇಣುಕಮ್ಮ ಎನ್.ಎ., ಶಿಲ್ಪಾ ಕಾರಿಗನೂರು, ಪ್ರವೀಣ್ ಪಾಲಂಕರ್, ಷಣ್ಮುಖಿ, ಗುತ್ಯಪ್ಪ, ರಮೇಶ್, ರಾಜು, ಅತಾವುಲ್ಲಾ, ಅಬ್ದುಲ್ ರಹೀಂ, ಕೊಟ್ರೇಶ್ ದೀಟೂರು, ಶಿವಕುಮಾರ್ ಕಾಗದವರ್ ಮತ್ತಿತರರು ಹಾಜರಿದ್ದರು.

# ಪಂಚಮಸಾಲಿ ಮಠದಲ್ಲಿಂದು ಸರಳ ಹರ ಜಾತ್ರೆ



ಹರಿಹರ, ಜ. 13- ಪಂಚಮಸಾಲಿ ಮಠದಲ್ಲಿ ನಾಳೆ ಸರಳವಾಗಿ ಹರ ಜಾತ್ರಾ ಮಹೋತ್ಸವ ಆಚರಿಸಲಾಗುವುದು ಹಾಗಾಗಿ ಆಹ್ವಾನ ಪತ್ರಿಕೆಯನ್ನು ಮಾಡಿಸಿರುವುದಿಲ್ಲ ಎಂದು ಪಂಚಮಸಾಲಿ ಗುರುಪೀಠಾಧ್ಯಕ್ಷ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿ ತಿಳಿಸಿದರು.

ಗುರುಪೀಠದ ಆವರಣದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿ ಯಲ್ಲಿ ಈ ವಿಷಯ ತಿಳಿಸಿದ ಅವರು, ಪಂಚಮಸಾಲಿ ಮಠ ಸ್ಥಾಪನೆ ಆದನಂತರ ಮಠದಲ್ಲಿ ಜಾತ್ರಾ ಪರಂಪರೆಯನ್ನು ಹುಟ್ಟು ಹಾಕಬೇಕು ಎಂಬ ಉದ್ದೇಶದಿಂದ ಪ್ರತಿವರ್ಷ ಮಕರ ಸಂಕ್ರಾಂತಿ ದಿನದಂದು ಹರ ಜಾತ್ರೆಯನ್ನು ಹಮ್ಮಿಕೊಂಡು ಸಮಾಜದ ಜನರನ್ನು ಒಗ್ಗೂಡಿಸುವ ಕೆಲಸವನ್ನು ಮಾಡಿಕೊಂಡು ಬರಲಾಗಿತ್ತು. ಮಠದ ಆವರಣದಲ್ಲಿ ಎರಡು ಬೃಹತ್ ಕಟ್ಟಡಗಳು ನಿರ್ಮಾಣ ವಾಗುತ್ತಿದ್ದು, ಅವುಗಳ ನಿರ್ಮಾಣ ಸಂಪೂರ್ಣವಾದ ನಂತರ, ಮುಂದಿನ ದಿನಗಳಲ್ಲಿ ಮತ್ತೆ ಹರ ಜಾತ್ರೆಯನ್ನು ಅದ್ಧೂರಿಯಾಗಿ ನಡೆಸಲಾಗುತ್ತದೆ ಎಂದು ಹೇಳಿದರು.

ಪೀಠದ ಆಡಳಿತ ಅಧಿಕಾರಿ ಡಾ. ರಾಜಕುಮಾರ ಮಾತನಾಡಿ, ಈ ಬಾರಿ ಹರ ಜಾತ್ರೆಯನ್ನು ಮೂರು ಉದ್ದೇಶಗಳೊಂದಿಗೆ ಆಚರಣೆ ಮಾಡುತ್ತಿದ್ದು, ರಾಣಿ ಚೆನ್ನಮ್ಮ ನವರ ದ್ವಿ ಶತಮಾನೋತ್ಸವ, ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳ ಸಪ್ತಮ ಪೀಠಾರೋಹಣ ಹಾಗೂ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ವಸಂತ ಹುಲ್ಲತ್ತಿ ತಂಡದ ಪದಗ್ರಹಣ ಕಾರ್ಯಕ್ರಮವನ್ನು ಅತ್ಯಂತ ಸರಳವಾಗಿ ಆಚರಣೆಯನ್ನು ಮಾಡಲಾಗುತ್ತಿದೆ ಎಂದು ಹೇಳಿದರು. ಬೆಳಗ್ಗೆ ಲಿಂಗೈಕ್ಯ ಶ್ರೀ ಮಹಾಂತ ಸ್ವಾಮಿಗಳ ಗದ್ದಿಗೆ ಮತ್ತು ಹರ ದೇವರಿಗೆ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ಪ್ರಸಾದ ವಿನಿಯೋಗ ನಡೆದು, 11 ಗಂಟೆಗೆ ವೇದಿಕೆಯ ಸಮಾರಂಭ ನಡೆಯಲಿದೆ.

ಗಡಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಹರ ಜಾತ್ರಾ ಮಹೋತ್ಸವದ ಅಧ್ಯಕ್ಷ ಸೋಮಣ್ಣ ಬೇವಿನಮರದ ಮಾತನಾಡಿ, ರಾಣಿ ಚೆನ್ನಮ್ಮ ನವರ ದ್ವಿಶತಮಾನೋತ್ಸವ ಆಚರಣೆ ಅಂಗವಾಗಿ ಈಗಾಗಲೇ ರಾಜ್ಯದಾದ್ಯಂತ ಸಂಚರಿಸುವ ಕಾರ್ಯವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಂಚಮಸಾಲಿ ಪೀಠದ ಧರ್ಮದರ್ಶಿ ಬಿ.ಸಿ. ಉಮಾಪತಿ, ದಾಸೋಹ ಸಮಿತಿಯ ರಾಜ್ಯಾಧ್ಯಕ್ಷ ಪ್ರಕಾಶ್ ಪಾಟೀಲ್, ಸಮಾಜದ ಪ್ರಧಾನ ಕಾರ್ಯದರ್ಶಿ ಪರಮೇಶ್ವರಪ್ಪ ಪಟ್ಟಣ್ಣ ಶೆಟ್ಟಿ, ಧರ್ಮದರ್ಶಿಗಳಾದ ಜ್ಯೋತಿ ಪ್ರಕಾಶ್, ಚಂದ್ರಶೇಖರ್ ಪೂಜಾರ್, ನಾಗಣ್ಣ ಷಣ್ಮುಖಪ್ಪ, ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ವಸಂತ ಹುಲ್ಲತ್ತಿ, ಪ್ರಧಾನ ಕಾರ್ಯದರ್ಶಿ ರಶ್ಮಿ ಕುಂಕೋದ್, ರಾಜೇಶ್ವರಿ ಬಳ್ಳಾರಿ, ರಾಜೇಂದ್ರ ಇತರರು ಹಾಜರಿದ್ದರು.

## ನಗರದ ಶ್ರೀ ದುರ್ಗಾಂಬಿಕಾ ದೇವಸ್ಥಾನ ಆವರಣದಲ್ಲಿ ಇಂದು ಸೂರ್ಯ ನಮಸ್ಕಾರ

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನ ಆವರಣದಲ್ಲಿ ಇಂದು ಬೆಳಿಗ್ಗೆ ಸೂರ್ಯ ನಮಸ್ಕಾರ ಕಾರ್ಯಕ್ರಮ ನಡೆಯಲಿದೆ.

ಬೆಳಿಗ್ಗೆ 5.45ಕ್ಕೆ ಓಂಕಾರ, 5.50ಕ್ಕೆ ಸೂರ್ಯ ನಮಸ್ಕಾರ (108 ಬಾರಿ), ಬೆಳಿಗ್ಗೆ 7.15ಕ್ಕೆ ಸಭಾ ಕಾರ್ಯಕ್ರಮ ಏರ್ಪಾಡಾಗಿದ್ದು, ದಿವ್ಯ ಸಾನ್ನಿಧ್ಯವನ್ನು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಕಲ್ಪ ಸೇವಾ ಫೌಂಡೇಷನ್ ಜಿ. ಮಹಾಂತೇಶ ವಹಿಸಲಿದ್ದಾರೆ.

ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಪಾಲಿಕೆ ಸದಸ್ಯ ಎ. ನಾಗರಾಜ್, ಸಮಾಜ ಸೇವಕ ಕಣಕುಪ್ಪಿ ಮುರುಗೇಶಪ್ಪ, ಯೋಗ ಶಿಕ್ಷಕ ಕೆ. ಕರಿಬಸಪ್ಪ, ಮಾಜಿ ಮೇಯರ್ ಗೋಣೆಪ್ಪ, ಮಹಾನಗರ ಪಾಲಿಕೆ ಸದಸ್ಯ ಎಲ್.ಡಿ. ಗೋಣೆಪ್ಪ, ಉತ್ತಂಗಿನ ಪ್ರಕಾಶ್ ಮುಖ್ಯ ಅತಿಥಿಗಳಾಗಿ ಭಾಗವಹಿಲಸಿದ್ದಾರೆ.

ಸುರೇಶ್ ಎಲ್.ಬಿ. ಶಿವಪುತ್ರಪ್ಪ, ದುಗ್ಗೇಶ್, ಕಿರಣ್‌ಕುಮಾರ್, ಶ್ರೀಕಾಂತ ಮತ್ತು ಸಂಕಲ್ಪ ಯೋಗ ಶಾಲೆಯ ಸದಸ್ಯರು ಉಪಸ್ಥಿತರಿರುವರು.

## ಚಿತ್ರದುರ್ಗ ಬೃಹನ್ಮಠದಲ್ಲಿ ಇಂದು

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಶ್ರೀ ಮುರಿಗಿ ಶಾಂತವೀರ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಲೀಲಾ ವಿಶ್ರಾಂತಿ ತಾಣದ ಆವ ರಣದಲ್ಲಿ ಇಂದು ಬೆಳಿಗ್ಗೆ 8.30 ಕ್ಕೆ ಶ್ರೀ ಶಿವಯೋಗಿ ಸಿದ್ದರಾಮರ ಜಯಂತಿ ಆಚರಿಸಲಾಗುವುದು. ಅಧ್ಯಕ್ಷತೆಯನ್ನು ಶಿವಯೋಗಿ ಸಿ. ಕಳಸದ ವಹಿಸಲಿದ್ದು, ಡಾ. ಬಸವಕುಮಾರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು.


ಸವಿನೆನಪು



ಲಿಂ|| ಶ್ರೀ ಜೋಗಪ್ಪರ ಕಾಡಪ್ಪನವರು
ಸ್ವಾತಂತ್ರ್ಯ ಹೋರಾಟಗಾರರು
ನಿಧನ : 06.11.1987

ಲಿಂ|| ಶ್ರೀಮತಿ ಫಕ್ಕೀರಮ್ಮ ಕಾಡಪ್ಪ
ನಿಧನ :
14.01.2019

ಪುತ್ರರು : ಶ್ರೀಮತಿ ಶೋಭಾ ಮತ್ತು ಜೆ.ಕೆ. ಕರಿಬಸಪ್ಪ ಮತ್ತು ಮಕ್ಕಳು
ಶ್ರೀಮತಿ ಲಕ್ಕಮ್ಮ ಮತ್ತು ಜೆ.ಕೆ. ಕೊಟ್ರಬಸಪ್ಪ ಮತ್ತು ಮಕ್ಕಳು
ಶ್ರೀಮತಿ ಕೆಂಚಮ್ಮ ಮತ್ತು ಜೆ.ಕೆ. ವೀರಣ್ಣ ಮತ್ತು ಮಕ್ಕಳು
ಶ್ರೀಮತಿ ಸುನಂದ ಮತ್ತು ಜೆ.ಕೆ. ಚಂದ್ರಶೇಖರ್ ಮತ್ತು ಮಕ್ಕಳು
ಶ್ರೀಮತಿ ಚಂದ್ರಕಲಾ ಮತ್ತು ಜೆ.ಕೆ. ಶಿವಾನಂದ ಮತ್ತು ಮಕ್ಕಳು
ಪುತ್ರಿ : ಶ್ರೀಮತಿ ಹೊನ್ನಮ್ಮ ಮತ್ತು ಟಿ.ಗಂಗಾಧರಪ್ಪ
ಮತ್ತು ಮರಿಮೊಮ್ಮಕ್ಕಳು ಹಾಗೂ ಜೋಗಪ್ಪರ ವಂಶಸ್ಥರು

ಶ್ರೀ ಬೀರಲಿಂಗೇಶ್ವರ ಅಂಡ್ ಕೋ., ಎಪಿಎಂಸಿ ಎ ಬ್ಲಾಕ್, ದಾವಣಗೆರೆ.
ವಿಶ್ವಾಸ್ ಸ್ಟೀಲ್ಸ್ & ಸಿಮೆಂಟ್ಸ್
ರಾಜ್‌ಭವನ್ ಗಾರ್ಡನ್ ಬಾರ್ & ರೆಸ್ಟೋರೆಂಟ್
ಪಿ.ಬಿ. ರೋಡ್, ದಾವಣಗೆರೆ.


## ಮಲೇಬೆನ್ನೂರಿನಲ್ಲಿ ಇಂದು ಆರೋಗ್ಯ ಮೇಳ

ಶ್ರೀ ಭದ್ರಕಾಳಿ ಸಮೇತ ವೀರ ಭದ್ರೇಶ್ವರ ದೇವಸ್ಥಾನದಲ್ಲಿ ಇಂದು ಸಂಕ್ರಾಂತಿಯ ಪ್ರಯುಕ್ತ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

ಇಂದು ಬೆಳಿಗ್ಗೆ 8 ರಿಂದ 10.30 ರವರೆಗೆ ಆದಿತ್ಯ ಸೂರ್ಯನಾರಾ ಯಣ ಹೋಮ ಪೂರ್ಣಾವತಿ ನಡೆಯಲಿದೆ. ಬೆಳಿಗ್ಗೆ 11 ರಿಂದ ಶ್ರೀ ರವಿಶಂಕರ್ ಗುರೂಜಿ ಆಶ್ರಮದ ಶಿಷ್ಯರಿಂದ ಸತ್ಸಂಗ ಇರುತ್ತದೆ. ಬೆಳಿಗ್ಗೆ 9 ರಿಂದ ರಾತ್ರಿ 8 ಗಂಟೆವರೆಗೆ ವಿಶೇಷ ಪ್ರಸಾದಗಳ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

**ಆರೋಗ್ಯ ಮೇಳ :** ವೀರ ಭದ್ರೇಶ್ವರ ದೇವಸ್ಥಾನದ ಆವರಣ ದಲ್ಲಿ ಮಲೇಬೆನ್ನೂರು ಲಯನ್ಸ್ ಕ್ಲಬ್‌ನಿಂದ ವಿವಿಧ ಸೇವಾ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳ ಲಾಗಿದೆ.

ಶ್ರೀ ವೀರಭದ್ರೇಶ್ವರ ಚಾರಿಟೇ ಬಲ್ ಟ್ರಸ್ಟ್ ಹಾಗೂ ಕಡ್ಲಿ ಐವಿಎಫ್ ಸೆಂಟರ್ (ದಾವಣಗೆರೆ) ಮತ್ತು ಕೃಷ್ಣ ಹೆಲ್ತ್‌ಕೇರ್, ಡಯಾಗ್ನೋಸ್ಟಿಕ್ ಸೆಂಟರ್ ಇವರ ಸಂಯುಕ್ತಾಶ್ರಯ ದಲ್ಲಿ ಆರೋಗ್ಯ ಮೇಳ, ರಕ್ತದಾನ ಶಿಬಿರ ಮತ್ತು ಉಚಿತ ಬಂಜೆತನ ನಿವಾರಣಾ ಸಮಾಲೋಚನಾ ಶಿಬಿರ ಗಳನ್ನು ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಏರ್ಪಡಿಸಲಾಗಿದೆ.


ಪ್ರಥಮ ವರ್ಷದ ಪುಣ್ಯಸ್ಮರಣೆ



ದಿ|| ಮಾರಪ್ಪನವರ ಮಗ
ಶರಣಪ್ಪ ದೊಡ್ಡಮನೆ
ನೀವು ನಮ್ಮನ್ನಗಲಿ ಇಂದಿಗೆ
ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ...
ಪತ್ನಿ, ಮಗ, ಅಳಿಯ, ಮಗಳು,
ಮೊಮ್ಮಗಳು ಹಾಗೂ
ದೊಡ್ಡಮನೆ ವಂಶಸ್ಥರು


## ಕಾನೂನು ಪದವೀಧರರಿಗೆ ತರಬೇತಿ

ದಾವಣಗೆರೆ, ಜ. 13 - ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ಭತ್ಯೆ ನೀಡಲು ಅರ್ಹ ಕಾನೂನು ಪದವೀಧರ ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಠಡಿ 46, ಎರಡನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ರಸ್ತೆ, ದಾವಣಗೆರೆ - 577006 ಕಚೇರಿಯಲ್ಲಿ ಅರ್ಜಿಗಳನ್ನು ಪಡೆದು ಇದೇ ದಿನಾಂಕ 18 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು ಎಂದು ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

## ಮಹಿಳೆಯರಿಗೆ ಉಚಿತ ಕೈ ಕಸೂತಿ ತರಬೇತಿ

ದಾವಣಗೆರೆ, ಜ. 13- ಭಾರತ ವಿಕಾಸ ಪರಿಷತ್ ಗೌತಮ ಶಾಖೆ ದಾವಣಗೆರೆ ವತಿಯಿಂದ ಇಲ್ಲಿನ ವಿದ್ಯಾನಗರದಲ್ಲಿ ಮಹಿಳೆಯರಿಗೆ ಉಚಿತ ಕೈ ಕಸೂತಿ ತರಬೇತಿ ಅರ್ಜಿ ಆಹ್ವಾನಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದವರು ಇದರ ಉಪಯೋಗ ಪಡೆದೊಳ್ಳಬಹುದು.ಹೆಚ್ಚಿನ ಮಾಹಿತಿಗಾಗಿ ಭವಾನಿ ಶಂಭುಲಿಂಗಪ್ಪ (78293 79675), ನೇತ್ರಾ ಮಧುಕರ್ (91643 48699), ಅಕ್ಷಯ್ ಸುರ್ವೆ (96065 81587) ಅವರನ್ನು ಸಂಪರ್ಕಿಸಬಹುದು.

## ನಿಂಗಪ್ಪ ಟಿ. ಅವರಿಗೆ ಪಿಹೆಚ್‌ಡಿ ಪದವಿ



ದಾವಣಗೆರೆ, ಜ. 13- ಬಳ್ಳಾರಿಯ ವಿಜಯ ನಗರದ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವಾಣಿಜ್ಯ ನಿಕಾಯದ, ವಾಣಿಜ್ಯಶಾಸ್ತ್ರ ವಿಭಾಗದ ಸಂಶೋಧಕರಾದ ನಿಂಗಪ್ಪ ಟಿ. ಅವರಿಗೆ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಪಿ.ಹೆಚ್. ಡಿ. ಪದವಿ ಪ್ರದಾನ ಮಾಡಿದೆ. ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಸಿದ್ದಪ್ಪ ಅವರ ಸಂಶೋಧನಾ ಮಾರ್ಗದರ್ಶನದಲ್ಲಿ 'ಎ ಸ್ಟಡಿ ಆನ್ ಕನ್ಸೂಮರ್ಸ್ ಬೈಯಿಂಗ ಬಿಹೇವಿಯರ್ ಟುವರ್ಡ್ಸ್ ಎಕೋ-ಫ್ರೆಂಡ್ಲಿ ಪ್ರೊಡಕ್ಟ್ - ಇನ್ ಕರ್ನಾಟಕ' ಎಂಬ ವಿಷಯದ ಕುರಿತು ಸಲ್ಲಿಸಿದ ಸಂಶೋಧನಾ ಪ್ರಬಂಧಕ್ಕೆ ಈ ಪದವಿ ಲಭಿಸಿದೆ. ಪ್ರಸ್ತುತ ನಿಂಗಪ್ಪ ಟಿ. ಅವರು ನಗರದ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿದ್ದಾರೆ.

## ಕೆಚ್ಚಲು ಕೊಯ್ದವನ ಬಂಧನ

**(1ನೇ ಪುಟದಿಂದ)** ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ಪಶು ಆಸ್ಪತ್ರೆಯಲ್ಲಿ ಹಸುಗಳಿಗೆ ಚಿಕಿತ್ಸೆ ಕೊಡಿಸಲಾಗಿದೆ. ಮೂರು ಹಸುಗಳೂ ಪ್ರಾಣಾಪಾಯದಿಂದ ಪಾರಾಗಿವೆ ಎಂದು ಮೂಲಗಳು ಹೇಳಿವೆ.

# ಪಿಎಲ್‌ಡಿ ಬ್ಯಾಂಕ್ ಮತ್ತೆ ಕಾಂಗ್ರೆಸ್ ವಶಕ್ಕೆ



**ರಾಣೇಬೆನ್ನೂರು**

ರಾಣೇಬೆನ್ನೂರು,ಜ.13- ನಿನ್ನೆ ನಡೆದ ರಾಣೇಬೆನ್ನೂರು ಪಿಎಲ್‌ಡಿ ಬ್ಯಾಂಕಿನ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಕಾಂಗ್ರೆಸ್ ಪಕ್ಷ ಮತ್ತೆ ಆಡಳಿತ ವಹಿಸಿಕೊಂಡಿದೆ. ವಿಧಾನಸಭೆ ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ ವಿಜೇತರನ್ನು ಅಭಿನಂದಿಸಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮಂಜನಗೌಡ ಪಾಟೀಲ, ಮುಖಂಡರಾದ ಹನುಮಂತಪ್ಪ ಬ್ಯಾಲದಹಳ್ಳಿ, ಬಸವರಾಜ ಹುಚ್ಚಗೊಂಡರ ಮತ್ತಿತರರು ಇದ್ದರು.



## ಹುಣ್ಣಿಮೆ : ಉಚ್ಚಂಗಿದುರ್ಗಕ್ಕೆ ಹರಿದು ಬಂದ ಜನಸಾಗರ

ಹರಪನಹಳ್ಳಿ, ಜ.13- ತಾಲ್ಲೂಕಿನ ಐತಿಹಾಸಿಕ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಉಚ್ಚಂಗಿದುರ್ಗದ ಶ್ರೀ ಉಚ್ಚೆಂಗೆಮ್ಮ ದೇವಿಯ ದರ್ಶನಕ್ಕೆ ಜನಸಾಗರವೇ ಹರಿದುಬಂದಿತು. ವಿವಿಧ ಜಿಲ್ಲೆಗಳಿಂದ ಸಾವಿರಾರು ಭಕ್ತರು ಅದರಲ್ಲೂ ಮಹಿಳೆಯರು ಹೆಚ್ಚಾಗಿ ಬೆಳಿಗ್ಗೆಯಿಂದಲೇ ಉಚ್ಚಂಗಿದುರ್ಗದ ಉಚ್ಚೆಂಗೆಮ್ಮನ ದರ್ಶನ ಪಡೆದರು.

## ಕೊಂಡಜ್ಜಿ ಅರಣ್ಯದಲ್ಲಿ ಹಿಮಾಲಯನ್ ಅಕಾಡೆಮಿ ಚಾರಣ



ದಾವಣಗೆರೆ,ಜ.13 - ಸ್ವಾಮಿ ವಿವೇಕಾನಂದ ಹಾಗೂ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ದಿನಾಚರಣೆ ಅಂಗವಾಗಿ ಕೊಂಡಜ್ಜಿ ಅರಣ್ಯದಲ್ಲಿ ಹಿಮಾಲಯನ್ ಅಡ್ವೆಂಚರ್ ಅಂಡ್ ನೇಚರ್ ಅಕಾಡೆಮಿ ವತಿಯಿಂದ ಚಾರಣ ವನ್ನು ಹಮ್ಮಿಕೊಳ್ಳಲಾಗಿತ್ತು. ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ವಿವೇಕಾನಂದರು ಹಾಗೂ ನೇತಾಜಿ ಯುವಕರ ಪಾಲಿನ ದಿವ್ಯ ಶಕ್ತಿ ಆಗಿದ್ದರು, ಅಂತಹ ಶಕ್ತಿ ನಿಮ್ಮದಾಗಲಿ ಎಂದು ಆಶಿಸಿದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎನ್. ಕೆ. ಕೊಟ್ರೇಶ್ ಚಾರಣದ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಅಕಾಡೆಮಿ ಅಧ್ಯಕ್ಷ ಕೊಂಡಜ್ಜಿ ರಾಜಶೇಖರ್, ಸದಸ್ಯರಾದ ಚಂದ್ರಮಾಪ್ಲಿ, ಕಿರಣ್, ಶ್ರೀನಿವಾಸ್, ಸಂತೋಷ್, ತೇಜಸ್ವಿನಿ, ಗಣೇಶ್, ಗುರುರಾಜ್, ಗೌಡ್ರು ಸುರೇಶ್, ಹನುಮಂತ, ಕಾರ್ತಿಕ್, ಅಣ್ಣಯ್ಯ. ಟಿ. ಶಿವಕುಮಾರ್. ಕು.ಚೇತನ್, ಕು. ಪರೀಕ್ಷಿತ್ ಇನ್ನು ಮುಂತಾದವರು ಚಾರಣ ಶಿಬಿರದಲ್ಲಿ ಭಾಗವಹಿಸಿದ್ದರು.

## ನಾಯಕತ್ವ ಬದಲಾವಣೆ ಇಲ್ಲ

**(1ನೇ ಪುಟದಿಂದ)** ವಿಶ್ವಾಸಕ್ಕೆ ತೆಗೆದುಕೊಳ್ಳುತ್ತದೆ, ಆದ್ದರಿಂದಲೇ ನಾವು ವಿಧಾನಸಭಾ ಚುನಾವಣೆಯಲ್ಲಿ ಜನತೆಗೆ ನೀಡಿದ ಭರವಸೆಗಳನ್ನು ಅಲ್ಪಾವಧಿಯಲ್ಲೇ ಅನುಷ್ಠಾನಗೊಳಿಸಿದ್ದೇವೆ. ಇದು ಪ್ರತಿಪಕ್ಷ ಬಿಜೆಪಿಗೆ ಸಹಿಸಲಾಗುತ್ತಿಲ್ಲ, ಅವರ ಜೊತೆಗೆ ಮಾಧ್ಯಮದ ಒಂದು ವರ್ಗವೂ ಸೇರಿಕೊಂಡಿದೆ ಎಂದರು.


ಭಾವಪೂರ್ಣ ಶ್ರದ್ಧಾಂಜಲಿ



ನಮ್ಮ ಬ್ಯಾಂಕಿನ ಕಾರ್ಯನಿರ್ವಾಹಕ ಮಂಡಳಿ
ಮಾಜಿ ನಿರ್ದೇಶಕರಾದ
ಶ್ರೀ ಐ.ಎಸ್. ಪ್ರಶಾಂತ್ ಆರಾಧ್ಯ
ಇವರು ದಿನಾಂಕ 13.01.2025ರಂದು ನಿಧನರಾಗಿದ್ದು, ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಶ್ರೀ ಬಿ.ಸಿ. ಉಮಾಪತಿ, ಅಧ್ಯಕ್ಷರು ಶ್ರೀ ಟಿ.ಎಸ್. ಜಯರುದ್ರೇಶ್, ಉಪಾಧ್ಯಕ್ಷರು

ಕಾರ್ಯನಿರ್ವಾಹಕ ಮಂಡಳಿ ಸದಸ್ಯರು

✦ ಶ್ರೀ ಕೋಗುಂಡಿ ಬಕ್ಕೇಶಪ್ಪ ✦ ಶ್ರೀ ಅಂದನೂರು ಮುಪ್ಪಣ್ಣ ✦ ಶ್ರೀ ಪಲ್ಲಾಗಟ್ಟಿ ಶಿವಾನಂದಪ್ಪ
✦ ಶ್ರೀ ಎಂ. ಚಂದ್ರಶೇಖರ್ ✦ ಶ್ರೀ ದೇವರಮನಿ ಶಿವಕುಮಾರ್ ✦ ಶ್ರೀ ಅಜ್ಜಂಪುರ ಶೆಟ್ರು ವಿಜಯಕುಮಾರ್
✦ ಶ್ರೀಮತಿ ಸುರೇಖಾ ಎಂ. ಚಿಗಟೇರಿ ✦ ಶ್ರೀ ಕಂಚಿಕೇರಿ ಮಹೇಶ್ ✦ ಶ್ರೀ ಇ.ಎಂ. ಮಂಜುನಾಥ
✦ ಶ್ರೀ ವಿ. ವಿಕ್ರಮ್ ✦ ಶ್ರೀಮತಿ ಎ.ಆರ್. ಅರ್ಚನಾ ✦ ಶ್ರೀ ಹೆಚ್.ಎಂ. ರುದ್ರಮುನಿಸ್ವಾಮಿ ✦ ಶ್ರೀ ಸೋಗಿ ಮುರುಗೇಶ್

ವೃತ್ತಿಪರ ನಿರ್ದೇಶಕರು

✦ ಶ್ರೀ ಮುಂಡಾಸ್ ವೀರೇಂದ್ರ, FCA ಚಾರ್ಟರ್ಡ್ ಅಕೌಂಟೆಂಟ್ ✦ ಶ್ರೀ ಮಲ್ಲಿಕಾರ್ಜುನ ಕಣವಿ, MA., LLB., ವಕೀಲರು
✦ ಶ್ರೀ ಬಿ.ಎಸ್. ಮಲ್ಲೇಶ್, B.Sc., LLB., ಪ್ರಧಾನ ವ್ಯವಸ್ಥಾಪಕರು ✦ ಶ್ರೀ ಆರ್.ಎ. ಪ್ರಸನ್ನ, ಉಪಪ್ರಧಾನ ವ್ಯವಸ್ಥಾಪಕರು

ಬ್ಯಾಂಕಿನ ಸಿಬ್ಬಂದಿ ವರ್ಗದವರು ಮತ್ತು ಲಕ್ಷ್ಮೀ ಠೇವಣಿ ಸಂಗ್ರಹಕಾರರು ಹಾಗೂ ನಿವೃತ್ತ ಸಿಬ್ಬಂದಿಯವರು

ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ.


# ಶ್ರೀ ಶರಣ ಬಸವೇಶ್ವರರ 40 ಮೂರ್ತಿಗಳ ಪ್ರತಿಷ್ಠಾಪನೆ

## ಮಹಾಪ್ರತ್ಯಂಗಿರಾ ದೇವಿ ಯಾಗ, ಕಂಕಣ ಭಾಗ್ಯ ಪೂಜೆ, ಪುರಾಣ: ಪ್ರಣಾವಾನಂದರಾಮ್ ಶ್ರೀ

ದಾವಣಗೆರೆ, ಜ. 13- ರಾಣೇಬೆನ್ನೂರು ತಾಲ್ಲೂಕು ಅರೇಮಲ್ಲಾಪುರ ಗ್ರಾಮದ ಶ್ರೀ ಶರಣ ಬಸವೇಶ್ವರ ಮಹಾಸಂಸ್ಥಾನದಲ್ಲಿ ಇದೇ ಏಪ್ರಿಲ್ 28ರ ಸೋಮವಾರ ಶ್ರೀ ಶರಣ ಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ಶರಣ ಬಸವೇಶ್ವರ 40 ಮೂರ್ತಿಗಳ ಪುನರ್ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಹಾಸಂಸ್ಥಾನದ ಪೀಠಾಧಿಪತಿ ಡಾ.ಪ್ರಣವಾನಂದರಾಮ್ ಸ್ವಾಮೀಜಿ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಸ್ವಾಮೀಜಿ, 108 ಮೂರ್ತಿಗಳನ್ನು ಪ್ರತಿಷ್ಠಾಪಿಸುವ ಸಂಕಲ್ಪ ನಮ್ಮದಾಗಿದ್ದು, ಈ ಪೈಕಿ ಅಂದು ಬೆಳಿಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ 40 ಮೂರ್ತಿಗಳ ಪ್ರತಿಷ್ಠಾಪನೆ ನಡೆಯಲಿದೆ ಎಂದರು. ಅದಕ್ಕೂ ಮುನ್ನಾ ದಿನ ಏ.27ರ ಭಾನುವಾರ ಸಂಜೆ 5 ಗಂಟೆಗೆ ಉಪ್ಪಿನ ಮಾಳಿ ಶ್ರೀ ಚೌಡೇಶ್ವರಿ ದೇವಸ್ಥಾನದಿಂದ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು. ನೆಗಳೂರು ಸಂಸ್ಥಾನ ಹಿರೇಮಠದ ಶ್ರೀ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಲಿದ್ದಾರೆ ಎಂದರು.

**ಮಹಾಪ್ರತ್ಯಂಗಿರಾ ದೇವಿ ಯಾಗ:** ಏ.28ರಂದು ಬೆಳಿಗ್ಗೆ ಮಹಾ ಪ್ರತ್ಯಂಗಿರಾ ದೇವಿ ಯಾಗ ಹಮ್ಮಿಕೊಂಡಿದ್ದು, ಯಾಗದಲ್ಲಿ 10 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ. ಯಾಗದ ಯಜಮಾನನ ಸ್ಥಾನದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಇರಲಿದ್ದು, ಕೇರಳದ ಕಾಲಭೈರವಾನಂದ ಸ್ವಾಮೀಜಿ ಯಾಗ ನಡೆಸಿಕೊಡಲಿದ್ದಾರೆ. ಆರೋಗ್ಯ, ಶತ್ರುನಾಶ ಮೊದಲಾದ ಕಾರಣಕ್ಕಾಗಿ ಈ ಯಾಗ ಮಾಡಲಾಗುತ್ತದೆ ಎಂದರು.



ಕೇರಳದ ತಾಂತ್ರಿಕ ವಿಧಿಗಳ ಪ್ರಕಾರ ನಡೆಯುವ ಈ ಯಾಗದಲ್ಲಿ 400 ಕೆ.ಜಿ ಮೆಣಸಿನಕಾಯಿ, 600 ಕೆಜಿ ತುಪ್ಪ, 150 ಕೆಜಿ ಸಾಸಿವೆ, 100 ಕೆಜಿ ಬತ್ತಿ, 51 ಬಗೆಯ ಹಣ್ಣು ಸೇರಿದಂತೆ 300 ಪದಾರ್ಥಗಳನ್ನು ಬಳಕೆ ಮಾಡಲಾಗುತ್ತದೆ ಎಂದು ಸ್ವಾಮೀಜಿ ವಿವರಿಸಿದರು.

ಏ.26ರಂದು ಮಹಾ ಕಂಕಣ ಭಾಗ್ಯ ಪೂಜೆ, ಧನ್ವಂತರಿ ಹೋಮವೂ ನಡೆಯಲಿದೆ. ಏ.17 ರಿಂದ 27ರವರೆಗೆ ಶರಣಬಸವೇಶ್ವರರ ಪುರಾಣ ಕಾರ್ಯಕ್ರಮ ನಡೆಯಲಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಮಹಾಸಂಸ್ಥಾನದ 9ನೇ ಪೀಠಾಧಿಪತಿ ಚಿರಂಜೀವಿ ದೊಡ್ಡಪ್ಪ ಅಪ್ಪನವರು ನೇತೃತ್ವ ವಹಿಸಲಿದ್ದಾರೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಆರ್.ಪ್ರತಾಪ್, ರಾಜೇಶ್ ಈಳಿಗೇರ, ಮಹಾಂತೇಶ್ ಆರ್., ರಮೇಶ್ ಬೆಳಲಗೆರೆ ಇದ್ದರು.

### ಜಾತಿಗಣತಿ ವರದಿ ಬಿಡುಗಡೆಗೆ ಒತ್ತಾಯ

ಸರ್ಕಾರವು ಈ ಕೂಡಲೇ ಜಾತಿ ಗಣಪತಿ ವರದಿ ಬಿಡುಗಡೆ ಮಾಡಬೇಕು ಎಂದು ಡಾ.ಪ್ರಣಾವನಂದರಾಮ್ ಸ್ವಾಮೀಜಿ ಒತ್ತಾಯಿಸಿದರು.

ಬ್ರಹ್ಮಶ್ರೀ ನಾರಾಯಣ ಗುರು ನಿಗಮವೂ ಸೇರಿದಂತೆ ಹಿಂದುಳಿದ ವರ್ಗಗಳ ನಿಗಮಗಳಿಗೆ ಸರ್ಕಾರ ಕೂಡಲೇ ಹಣ ಬಿಡುಗಡೆ ಮಾಡುವಂತೆ ಸ್ವಾಮೀಜಿ ಆಗ್ರಹಿಸಿದರು.

ಸರ್ಕಾರ 23 ನಿಗಮಗಳ ಪೈಕಿ 5 ನಿಗಮಗಳಿಗೆ ಮಾತ್ರ ಹಣ ನೀಡಿದ್ದು, ಹಿಂದುಳಿದ ವರ್ಗಕ್ಕೂ ಎಲ್ಲಾ ಸೌಲಭ್ಯಗಳು ಸಿಗಲಿ ಎಂಬ ಹಿನ್ನೆಲೆಯಲ್ಲಿ ಬರುವ ಬಜೆಟ್ ಅಧಿವೇಶನದಲ್ಲಿ ಎಲ್ಲಾ ಹಿಂದುಳಿದ ವರ್ಗಗಳ ನಿಗಮಗಳಿಗೆ ಅನುದಾನ ನೀಡಬೇಕು. ಮಠಗಳಿಗೂ ಸರ್ಕಾರ ಅನುದಾನ ನೀಡಬೇಕು ಎಂದು ಒತ್ತಾಯಿಸಿದರು.

# ನಿರ್ಲಕ್ಷ್ಯ ಬಿಡಿ, ಸಂಚಾರಿ ನಿಯಮ ಪಾಲಿಸಿ

## 'ಹೆಲ್ಮೆಟ್ ಧರಿಸಿ ಜೀವ ಉಳಿಸಿ' ಅಭಿಯಾನದಲ್ಲಿ ಹೆಚ್ಚುವರಿ ಎಸ್ಪಿ ವಿಜಯ ಸಂತೋಷ್



ದಾವಣಗೆರೆ, ಜ.13- ಜೀವ ಅತ್ಯಂತ ಅಮೂಲ್ಯವಾಗಿದೆ. ಅಸಡ್ಡೆ ಮತ್ತು ನಿರ್ಲಕ್ಷ್ಯ ಮನೋಭಾವದಿಂದ ಯಾರೂ ವಿನಾಕಾರಣದಿಂದ ಜೀವ ಕಳೆದುಕೊಳ್ಳಬಾರದು ಎಂದು ಹೆಚ್ಚುವರಿ ಎಸ್ಪಿ ವಿಜಯಕುಮಾರ್ ಎಂ. ಸಂತೋಷ್ ಸಲಹೆ ನೀಡಿದರು.

ಇಲ್ಲಿನ ಅಖ್ತರ್ ರಜ್ಹಾ ವೃತ್ತದಲ್ಲಿ ಸೋಮವಾರ ಆಮ್ ಆದ್ಮಿ ಪಾರ್ಟಿಯ ಜಿಲ್ಲಾ ಘಟಕದಿಂದ ಏರ್ಪಡಿಸಿದ್ದ 'ಹೆಲ್ಮೆಟ್ ಧರಿಸಿ ಜೀವ ಉಳಿಸಿ' ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜನವರಿ 1ರಿಂದ 13ರ ವರೆಗೆ ಜಿಲ್ಲೆಯೊಂದರಲ್ಲಿಯೇ 12 ಜನರು ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಬೈಕ್ ಸ್ಕಿಡ್ ಆಗಿ, ಯಾವುದೋ ವಾಹನ ಡಿಕ್ಕಿ ಹೊಡೆದು ಸಂಭವಿಸಬಹುದಾದ ದುರಂತ ಸಾವು-ನೋವುಗಳನ್ನು ತಡೆಯಬೇಕಾದರೆ ಕಡ್ಡಾಯವಾಗಿ ಹೆಲ್ಮೆಟ್ ಧರಿಸಿಕೊಳ್ಳುವಂತೆ ಕಿವಿಮಾತು ಹೇಳಿದರು.

ಈ ಭಾಗದಲ್ಲಿ ಬೈಕ್‌ನಲ್ಲಿ 3-4 ಜನ ಓಡಾಡುವುದು, ನಂಬರ್ ಪ್ಲೇಟ್, ಡಿಎಲ್, ಆರ್‌ಸಿ, ಲೈಸನ್ಸ್ ಇಲ್ಲದೇ ವಾಹನ ಓಡಿಸುವುದು, ವ್ಹೀಲಿಂಗ್ ಮಾಡುವುದು ಹೆಚ್ಚಾಗಿದೆ. ಸಾರ್ವಜನಿಕರಿಗೆ ಯಾರೂ ತೊಂದರೆ ಕೊಡಬಾರದು.

ದಾಖಲೆ ಇಲ್ಲದೇ ವಾಹನ ಚಲಾಯಿಸಿದರೆ ಕನಿಷ್ಠ 1ಸಾವಿರ ರೂ., ಅಪ್ರಾಪ್ತರು ಚಲಾಯಿಸಲು ವಾಹನ ನೀಡಿದರೆ 25 ಸಾವಿರ ರೂ. ದಂಡ ವಿಧಿಸಲಾಗುವುದು. ಆದ್ದರಿಂದ 18 ವರ್ಷದೊಳಗಿನ ಬಾಲಕರಿಗೆ ಯಾರೂ ವಾಹನ ಕೊಡಬಾರದು ಎಂದು ಎಚ್ಚರಿಸಿದರು. ಪೊಲೀಸ್ ಇಲಾಖೆಯಿಂದ ಮಾತ್ರ ಅಪರಾದ, ಅಪಘಾತಗಳನ್ನು ತಡೆಯಲು ಸಾಧ್ಯವಿಲ್ಲ. ಅದಕ್ಕೆ ಸಾರ್ವಜನಿಕರೂ ಕೈಜೋಡಿಸಬೇಕು ಎಂದು ಸಂಚಾರ ವೃತ್ತ ನಿರೀಕ್ಷಕ ಮಂಜುನಾಥ್ ಹೇಳಿದರು.

ಯುವ ಜನತೆಯ ಹುಂಬತನದಿಂದ ಪ್ರತಿ ವರ್ಷ ದೇಶದಲ್ಲಿ 1.75 ಲಕ್ಷ ಮಂದಿ ಮೃತಪಡುತ್ತಿದ್ದು, ದಿನಕ್ಕೆ 450 ರಿಂದ 500 ಜನರು ಸಾವನಪ್ಪುತ್ತಿದ್ದಾರೆ. ಜನರಲ್ಲಿರುವ ಇಂತಹ ನಿರ್ಲಕ್ಷ್ಯ ಮನೋಭಾವ ಹೋಗಬೇಕಾದರೆ ಅರಿವುದು ಮೂಡಿಸುವುದು ಅತ್ಯವಶ್ಯ ಎಂದು ಹೇಳಿದರು.

ಆಜಾದ್ ನಗರ ಠಾಣೆಯ ಪೊಲೀಸ್ ನಿರೀಕ್ಷಕ ಅಶ್ವಿನ್‌ಕುಮಾರ್ ಮಾತನಾಡಿ, ವಾಹನ ಸವಾರರಿಗೆ ಒಳ್ಳೆಯದಾಗಲೆಂಬ ಸದುದ್ದೇಶದಿಂದಲೇ ವಾಹನ, ದಾಖಲೆ ತಪಾಸಣೆ ನಡೆಸಲಾಗುತ್ತದೆ. ಸಂಚಾರ ನಿಯಮ ಪಾಲನೆಯು ಎಲ್ಲರ ಆದ್ಯ ಕರ್ತವ್ಯವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ಕೆ.ಎಸ್. ಶಿವಕುಮಾರಪ್ಪ, ಪದಾಧಿಕಾರಿಗಳಾದ ಗಣೇಶ ದುರ್ಗದ, ಪ್ರೊ. ಧರ್ಮ ನಾಯ್ಕ, ಆದಿಲ್ ಖಾನ್, ಸುರೇಶ್ ಶಿಡ್ಲಪ್ಪ, ರವೀಂದ್ರ, ಶಬ್ಬೀರ್ ಅಹ್ಮದ್, ಬಸವರಾಜ್, ಹನುಮಂತ ನಾಯ್ಕ, ಅಜಿತ್ ಕುಮಾರ್, ಮೊಹಮ್ಮದ್ ಗೌಸ್, ವಿಕಾಸ್ ಮತ್ತಿತರರಿದ್ದರು.

# ರೈತ ನಾಯಕ ದಲ್ಲೆವಾಲಾರ ಪ್ರಾಣ ಉಳಿಸಿ

## ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸುವಂತೆ ಸಂಯುಕ್ತ ಹೋರಾಟ ಕರ್ನಾಟಕ ಆಗ್ರಹ




ದಾವಣಗೆರೆ, ಜ.13- ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲಾರ ಪ್ರಾಣ ಉಳಿಸಲು ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಬೇಕೆಂದು ಆಗ್ರಹಿಸಿ, ಸೋಮವಾರ ಸಂಯುಕ್ತ ಹೋರಾಟ ಕರ್ನಾಟಕದ ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಯದೇವ ವೃತ್ತದಲ್ಲಿ ಜಮಾಯಿಸಿದ ರೈತ ಮತ್ತು ಕಾರ್ಮಿಕ ಸಂಘಟನೆಗಳ ಪದಾಕಾರಿಗಳು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರೈತ ಹೋರಾಟ ವಾಪಸ್ ಪಡೆಯುವಾಗ ನೀಡಿದ್ದ ಲಿಖಿತ ಭರವಸೆ ಈಡೇರಿ ಸುವಂತೆ ಆಗ್ರಹಿಸಿ, ದಿಲ್ಲಿಯಲ್ಲಿ ಅಮರಣಾಂತರ ಉಪವಾಸ ಕುಳಿತಿರುವ ದಲ್ಲೆವಾಲಾರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು.

ಈ ವೇಳೆ ಕಾರ್ಮಿಕ ಮುಖಂಡ ಎಚ್.ಜಿ. ಉಮೇಶ್ ಆವರಗೆರೆ ಮಾತನಾಡಿ, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿಗೆ ಕಾನೂನು ಜಾರಿ, ಸಾಲ ಮನ್ನಾ ಸೇರಿ ನಾನಾ ಬೇಡಿಕೆಗಳಿಗೆ ಆಗ್ರಹಿಸಿ 48 ದಿನಗಳಿಂದ 70 ವರ್ಷದ ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲಾ ಆಮರಣಾಂತ ಉಪವಾಸ ಕೈಗೊಂಡಿದ್ದಾರೆ. ಇವರ ದೇಹ ನಿತ್ರಾಣಗೊಂಡು, ಮಾಂಸಖಂಡಗಳು ತೂಕ ಕಳೆದುಕೊಂಡಿವೆ. ರಕ್ತದೊತ್ತಡ ಸಹ ಅಪಾಯಕಾರಿ ಮಟ್ಟಕ್ಕೆ ಕುಸಿದಿದ್ದು, ಯಾವಾಗ ಬೇಕಾದರೂ ಪ್ರಾಣ ಹೋಗಬಹುದು ಎಂದು ರೈತ ನಾಯಕ ಇಂತಹ ಪರಿಸ್ಥಿತಿಗೆ ತಲುಪಲು ಕೇಂದ್ರ ಸರ್ಕಾರವೇ ನೇರ ಕಾರಣವಾಗಿದೆ ಎಂದು ಆರೋಪಿಸಿದರು.

ಕರಾಳ ಕೃಷಿ ಕಾಯಿದೆಗಳ ರದ್ದತಿ ಹಾಗೂ ಕನಿಷ್ಠ ಬೆಂಬಲ ಬೆಲೆ ಖಾತರಿಗೆ ಕಾನೂನು ಮಾನ್ಯತೆ ನೀಡಬೇಕೆಂಬುದು ಸೇರಿದಂತೆ ನಾನಾ ಹಕ್ಕೊತ್ತಾಯಗಳಿಗಾಗಿ ಒತ್ತಾಯಿಸಿ 385 ದಿನಗಳ ಕಾಲ ದಿಲ್ಲಿಯಲ್ಲಿ ರೈತರು ಪ್ರತಿಭಟನೆ ನಡೆಸಿದ್ದ ವೇಳೆ ಕೇಂದ್ರ ಸರ್ಕಾರ ನೀಡಿದ್ದ ಭರವಸೆಯನ್ನು ಈಡೇರಿಸದೆಯೇ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ರೈತ ಸಂಘದ ಹೊನ್ನೂರು ಮುನಿಯಪ್ಪ ದೂರಿದರು.

ಎಐಯುಟಿಯುಸಿಯ ಮಂಜುನಾಥ್ ಕೈದಾಳೆ ಮಾತನಾಡಿ, ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲಾರ ಪ್ರಾಣ ಉಳಿಸಲು ಕೇಂದ್ರ ಸರ್ಕಾರ ಹೋರಾಟನಿರತರ ಜತೆ ಮಾತುಕತೆ ಆರಂಭಿಸಬೇಕು, ಎಲ್ಲಾ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಖಾತರಿ ನೀಡುವ ಕಾನೂನು ಜಾರಿ ಮಾಡಬೇಕು, ರೈತರ ಕೃಷಿ ಸಾಲ ಮನ್ನಾ ಮಾಡಬೇಕು, ವಿದ್ಯುತ್ ಖಾಸಗೀಕರಣ ಕೈ ಬಿಡುವುದರ ಜತೆಗೆ ಪಂಪ್‌ಸೆಟ್ ಮೀಟರೀಕರಣದ ಪ್ರಯತ್ನವನ್ನು ಕೂಡಲೇ ನಿಲ್ಲಿಸಬೇಕು, 60 ವರ್ಷ ದಾಟಿರುವ ಕೃಷಿಕರಿಗೆ ಮಾಸಿಕ 5 ಸಾವಿರ ರೂ. ಪಿಂಚಣಿ ನೀಡಬೇಕು, ಕರಾಳ ಕೃಷಿ ಕಾಯಿದೆಗಳನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ನಾನಾ ಸಂಘಟನೆಗಳ ಮುಖಂಡರಾದ ಕೆ.ಎಚ್. ಆನಂದರಾಜು, ಬಾಡಾ ಕ್ರಾಸ್ ಶ್ರೀನಿವಾಸ್, ಐರಣಿ ಚಂದ್ರು, ಪಾಲವ್ವನಹಳ್ಳಿ ಪ್ರಸನ್ನಕುಮಾರ್, ಡಾ.ಸುನೀತ್‌ಕುಮಾರ್, ಮಧು ತೊಗಲೇರಿ, ಸತೀಶ್ ಅರವಿಂದ್, ಪವಿತ್ರ, ಪರಶುರಾಮ, ಭರಮಪ್ಪ, ಗುಮ್ಮನೂರು ಬಸವರಾಜ, ಏಳುಕೋಟಿ ಮತ್ತಿತರರಿದ್ದರು.

## ಎಸ್ಸೆಸ್ ಭೇಟಿ ಮಾಡಿದ ಮೇಯರ್




ಎಸ್ಸೆಸ್ ಅವರನ್ನು ದಾವಣಗೆರೆ ಮಹಾನಗರ ಪಾಲಿಕೆ ಮಹಾಪೌರ ಕೆ. ಚಮನ್ ಸಾಬ್ ಅವರು ಭೇಟಿ ಮಾಡಿ ಆರೋಗ್ಯ, ಯೋಗಕ್ಷೇಮ ವಿಚಾರಿಸಿದರು. ಈ ಸಂದರ್ಭದಲ್ಲಿ ಜಬೀವುಲ್ಲಾ, ಝುಬೇರ್, ಬುಡೇನ್ ಹಾಗೂ ಮುಖಂಡರು ಉಪಸ್ಥಿತರಿದ್ದರು.

## ಎಸ್ಸೆಸ್ ಭೇಟಿ ಮಾಡಿದ ಮಾಜಿ ಮೇಯರ್ ಅಶ್ವಿನಿ



ಎಸ್ಸೆಸ್ ಅವರನ್ನು ಪಾಲಿಕೆ ಮಾಜಿ ಮೇಯರ್ ಅಶ್ವಿನಿ, ಪ್ರಶಾಂತ್ ಹಾಗೂ ವಿನಾಯಕ ರೈಸ್ ಮಿಲ್ ಮಾಲೀಕ ವಿ. ಸಿದ್ದೇಶ್, ಹಿರೇತೊಗಲೇರಿ ಕುಮಾರ ಸ್ವಾಮಿ, ಕರೇಶಿವಪ್ಪ ಮಂಜುನಾಥ್, ದಾದು ಅವರುಗಳು ಭೇಟಿ ಮಾಡಿ, ಆರೋಗ್ಯ, ಯೋಗಕ್ಷೇಮ ವಿಚಾರಿಸಿದರು.

## ಎಸ್ಸೆಸ್ ಭೇಟಿ ಮಾಡಿದ ನಂದಿಗಾವಿ ಶ್ರೀನಿವಾಸ್



ದಾವಣಗೆರೆ, ಜ. 13- ಎಸ್ಸೆಸ್ ಅವರನ್ನು ಹರಿಹರ ಕಾಂಗ್ರೆಸ್ ಮುಖಂಡರಾದ ನಂದಿಗಾವಿ ಶ್ರೀನಿವಾಸ್ ಭೇಟಿ ಮಾಡಿ ಆರೋಗ್ಯ ವಿಚಾರಿಸಿ, ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ, ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ. ಬಿ. ಅಬಿದಾಲಿ, ಹರಿಹರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್. ಬಿ. ಹನುಮಂತಪ್ಪ, ಹರಿಹರ ತಾಲ್ಲೂಕು ಪಂಚಾಯತ್ ಕೆಡಿಪಿ ಸದಸ್ಯ ಬಿ.ಬಿ.ಮಲ್ಲೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕುಮಾರ ವ್ಯಾಸಭಾರತ ಕೃತಿಯ ಸಂಪುಟಗಳ ಲೋಕಾರ್ಪಣೆ

ಬೆಂಗಳೂರು, ಜ.13- 'ಮನೆಗೊಂದು ಗ್ರಂಥಾಲಯ' ಅಂಗವಾಗಿ ಗೃಹ ಕಚೇರಿ ಕೃಷ್ಣಾದಲ್ಲಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಯೋಜನೆಯ ಮೊದಲ ಗ್ರಂಥಾಲಯ ಉದ್ಘಾಟಿಸಿ, ಕುಮಾರ ವ್ಯಾಸಭಾರತ ಕೃತಿಯ ಸಂಪುಟಗಳನ್ನು ಲೋಕಾರ್ಪಣೆ ಮಾಡಿದರು.

ಹಿರಿಯ ಸಾಹಿತಿ ನಾಡೋಜ ಡಾ.ಹಂಪ ನಾಗರಾಜಯ್ಯ 'ಮನೆಗೊಂದು ಗ್ರಂಥಾಲಯ' ಯೋಜನೆಯ ಮೊದಲ ಗ್ರಂಥಾಲಯಕ್ಕೆ ಚಾಲನೆ ನೀಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಗ್ರಂಥಾಲಯ ಫಲಕ ಅನಾವರಣಗೊಳಿಸಿದರು. ಮನೆಗೊಂದು ಗ್ರಂಥಾಲಯ ಯೋಜನೆಯು ಕನ್ನಡ ಪುಸ್ತಕ ಪ್ರಾಧಿಕಾರದ ಮಹತ್ವಾಕಾಂಕ್ಷೆಯ ಯೋಜನೆ ಯಾಗಿದ್ದು, ರಾಜ್ಯಾದ್ಯಂತ ಒಂದು ಲಕ್ಷ ಮನೆಗಳಲ್ಲಿ ಗ್ರಂಥಾಲಯ ಸ್ಥಾಪನೆ ಗುರಿ ಹೊಂದಲಾಗಿದೆ. ಯುವಪೀಳಿಗೆಯಲ್ಲಿ ಪುಸ್ತಕಾಭಿರುಚಿ ಬೆಳೆಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ, ಅಲ್ಲದೆ, ಮರೆಯಾಗುತ್ತಿರುವ ಪುಸ್ತಕ ಸಂಸ್ಕೃತಿ ಉಳಿಸುವಲ್ಲಿ ಪ್ರತಿ ಮನೆಯಲ್ಲಿಯೂ ಒಂದು ಪುಟ್ಟ ಗ್ರಂಥಾಲಯ ಕಟ್ಟುವುದು ಈ ಯೋಜನೆಯ ಕನಸಾಗಿದೆ ಎಂದರು.

ಕನ್ನಡ ಸಾಹಿತ್ಯ ಲೋಕದ ಅಜರಾಮರ ಕೃತಿ 'ಕುಮಾರವ್ಯಾಸ ಭಾರತ'ವನ್ನು ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ಒದಗಿಸುವ ಭರವಸೆ ಹಿನ್ನೆಲೆಯಲ್ಲಿ ಎರಡು ಸಂಪುಟಗಳಿಗೆ 500 ರೂ. ನಿಗದಿಪಡಿಸಲಾಗಿದೆ ಎಂದು ಪ್ರಾಧಿಕಾರ ತಿಳಿಸಿದೆ.

# ಕೋರ್ಟ್ ಆದೇಶವಿದ್ದರೂ ಪತಿ ಜೊತೆ ಬಾಳಲೊಪ್ಪದ ಪತ್ನಿಗೆ ಜೀವನಾಂಶದ ಹಕ್ಕು

**ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು**

ನವದೆಹಲಿ, ಜ.13- ಪತಿ ಜೊತೆ ಬಾಳುವಂತೆ ಪತ್ನಿಗೆ ಕೋರ್ಟ್ ಆದೇಶಿಸಿದ್ದರೂ, ಪತ್ನಿ ಬೇಡ ಎನ್ನಲು ಸಕಾರಣಗಳಿದ್ದರೆ, ಆಕೆ ಜೀವನಾಂಶ ಪಡೆಯಲು ಅರ್ಹಳು ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಪರಸ್ಪರ ಬೇರೆಯಾಗಿರುವ, ಜಾರ್ಖಂಡ್‌ನ ಪತಿ–ಪತ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಈ ತೀರ್ಮಾನ ನೀಡಿದೆ. ಇವರು 2014ರ ಮೇ 1ರಂದು ಮದುವೆಯಾಗಿದ್ದರು. ಆದರೆ 2015ರ ಆಗಸ್ಟ್‌ನಲ್ಲಿ ಬೇರೆಯಾದರು. ದಂಪತಿ ಒಟ್ಟಾಗಿ ಬಾಳಬೇಕು ಎಂಬ ಆದೇಶ ನೀಡಬೇಕು ಎಂಬ ಕೋರಿಕೆಯೊಂದಿಗೆ ಪತಿಯು ರಾಂಚಿಯ ಕೌಟುಂಬಿಕ ನ್ಯಾಯಾಲಯದ ಮೊರೆ ಹೋದರು.

ಪತಿಯು ತನಗೆ ಕಿರುಕುಳ ನೀಡುತ್ತಿದ್ದಾನೆ, 5 ಲಕ್ಷ ರೂ. ವರದಕ್ಷಿಣೆಗೆ ಪೀಡಿಸುತ್ತಿದ್ದಾನೆ ಎಂದು ಪತ್ನಿಯು ನ್ಯಾಯಾಲಯಕ್ಕೆ ತಿಳಿಸಿದ್ದಳು. ಪತಿಯು ಪತ್ನಿಯ ಜೊತೆ ವಾಸಿಸಲು ಬಯಸುತ್ತಿದ್ದಾನೆ ಎಂದು ಹೇಳಿದ್ದ ಕೌಟುಂಬಿಕ ನ್ಯಾಯಾಲಯವು, ಪರಸ್ಪರರು ಒಟ್ಟಿಗೆ ಬಾಳ್ವೆ ನಡೆಸಬೇಕು ಎಂದು 2022ರಲ್ಲಿ ಆದೇಶಿಸಿತ್ತು. ಆದರೆ ಈ ಆದೇಶವನ್ನು ಪತ್ನಿ ಪಾಲಿಸಲಿಲ್ಲ.

ಬದಲಿಗೆ ಆಕೆಯು, ತನಗೆ ಜೀವನಾಂಶ ಬೇಕು ಎಂದು ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದಳು. ಪತ್ನಿಗೆ ತಿಂಗಳಿಗೆ 10 ಸಾವಿರ ರೂ. ಜೀವನಾಂಶ ನೀಡಬೇಕು ಎಂದು ನ್ಯಾಯಾಲಯವು ಪತಿಗೆ ಆದೇಶಿಸಿತು.

ನಂತರದಲ್ಲಿ ಪತಿಯು ಈ ಆದೇಶವನ್ನು ಜಾರ್ಖಂಡ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ. ಕೌಟುಂಬಿಕ ನ್ಯಾಯಾಲಯದ ಆದೇಶವಿದ್ದರೂ ಪತಿಯು ತನ್ನ ಗಂಡನ ಮನೆಗೆ ಹೋಗಿಲ್ಲ ಎಂದು ಹೈಕೋರ್ಟ್ ಹೇಳಿತು. ಪತ್ನಿಗೆ ಜೀವನಾಂಶವನ್ನು ಕೊಡಬೇಕಿಲ್ಲ ಎಂದು ಅದು ಆದೇಶ ನೀಡಿತು. ಈ ಆದೇಶವನ್ನು ಪ್ರಶ್ನಿಸಿ ಪತ್ನಿಯು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದಳು.

ಹೈಕೋರ್ಟ್ ಆದೇಶವನ್ನು ರದ್ದುಪಡಿಸಿರುವ ಸುಪ್ರೀಂ ಕೋರ್ಟ್, ಪತ್ನಿಯ ಮೇಲ್ಮನವಿಯನ್ನು ಮಾನ್ಯ ಮಾಡಿದೆ. ಪತಿಯ ಮನೆಯಲ್ಲಿ ಈಕೆಗೆ ಶೌಚಾಲಯ ಬಳಸಲು ಅವಕಾಶ ಕೊಡುತ್ತಿರಲಿಲ್ಲ, ಆಕೆಗೆ ಅಡುಗೆ ಮಾಡಲು ಸೂಕ್ತ ಸೌಲಭ್ಯ ಒದಗಿಸುತ್ತಿರಲಿಲ್ಲ, ಇವು ಆಕೆಯನ್ನು ಅಲ್ಲಿ ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂಬುದನ್ನು ಸೂಚಿಸುತ್ತಿವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಬೇರೆಯಾಗಿರುವ ಪತ್ನಿಗೆ ತಿಂಗಳಿಗೆ 10 ಸಾವಿರ ರೂ. ಜೀವನಾಂಶ ಕೊಡಬೇಕು ಎಂದು ಪತಿಗೆ ಸೂಚಿಸಿದೆ.

ಮದುವೆಯ ಸಂಬಂಧವನ್ನು ಪುನರ್‌ಸ್ಥಾಪಿಸುವ ಆದೇಶವನ್ನು ಪತಿಯು ಕೋರ್ಟ್‌ನಿಂದ ಪಡೆದುಕೊಂಡ ನಂತರದಲ್ಲಿಯೂ, ಪತ್ನಿಯು ಆತನ ಜೊತೆ ವಾಸ ಮಾಡಲು ನಿರಾಕರಿಸಿದರೆ, ಆಕೆಗೆ ಜೀವನಾಂಶ ಕೊಡಬೇಕಾಗುತ್ತದೆಯೇ ಎಂಬ ಕಾನೂನಿನ ಪ್ರಶ್ನೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇರುವ ವಿಭಾಗೀಯ ಪೀಠವು ಇತ್ಯರ್ಥಪಡಿಸಿದೆ. ಈ ವಿಚಾರವಾಗಿ ಇಂಥದ್ದೇ ನಿಯಮ ಎಂಬುದು ಇಲ್ಲ, ಇದು ಪ್ರಕರಣವನ್ನು ಆಧರಿಸಿರುತ್ತದೆ ಎಂದು ಪೀಠ ಹೇಳಿದೆ.

ಮದುವೆಯ ಸಂಬಂಧವನ್ನು ಪುನರ್‌ಸ್ಥಾಪಿಸುವ ಕೋರ್ಟ್ ಆದೇಶವನ್ನು ಪತ್ನಿಯು ಪಾಲಿಸಿಲ್ಲ ಎಂದಾದರೆ, ಅದೊಂದೇ ಕಾರಣಕ್ಕೆ ಆಕೆಗೆ ಜೀವನಾಂಶ ನಿರಾಕರಿಸಲು ಆಗುತ್ತದೆಯೇ? ಎಂಬ ಪ್ರಶ್ನೆಗೆ ಹಲವು ಹೈಕೋರ್ಟ್‌ಗಳು ಉತ್ತರ ಒದಗಿಸಿವೆ. ಆದರೆ ಈ ವಿಚಾರದಲ್ಲಿ ನಿರ್ದಿಷ್ಟವಾದ ಅಭಿಪ್ರಾಯ ಇಲ್ಲ ಎಂದು ಸುಪ್ರೀಂ ಕೋರ್ಟ್‌ನ ಪೀಠವು ಹೇಳಿದೆ.

ಪ್ರಕರಣದ ಸತ್ಯಾಸತ್ಯತೆಯನ್ನು ಇದು ಆಧರಿಸಿರುತ್ತದೆ. ಕೋರ್ಟ್ ಆದೇಶದ ಹೊರತಾಗಿಯೂ, ಪತಿಯ ಜೊತೆ ಬಾಳ್ವೆ ನಡೆಸುವುದನ್ನು ನಿರಾಕರಿಸುವುದಕ್ಕೆ ಪತ್ನಿಗೆ ಸಾಕಷ್ಟು ಕಾರಣಗಳು ಇವೆ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ ಎಂದು ಪೀಠ ವಿವರಿಸಿದೆ.

## ಜೈ ಬಾಪು, ಜೈ ಭೀಮ್.. ಅಭಿಯಾನ ಯಶಸ್ವಿಗೊಳಿಸಿ : ಸಿಎಂ

ಬೆಂಗಳೂರು, ಜ.13- ಜೈ ಬಾಪು, ಜೈ ಭೀಮ್, ಜೈ ಸಂವಿಧಾನದ ಐತಿಹಾಸಿಕ ಅಭಿಯಾನ ಯಶಸ್ವಿಗೊಳಿಸಲು ಇದೇ 21ರಂದು ನಡೆಯಲಿರುವ ಬೆಳಗಾವಿ ಸಮಾವೇಶಕ್ಕೆ ಬನ್ನಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಡಿನ ಜನತೆಗೆ ಕರೆ ನೀಡಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಬೆಳಗಾವಿ 'ಗಾಂಧಿ ಭಾರತ' ಕಾರ್ಯಕ್ರಮದ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟ, ದೇಶದ ಸ್ವಾತಂತ್ರ್ಯ ಮತ್ತು ಸಂವಿಧಾನದ ಬಗ್ಗೆ ಗೌರವ ಇರುವ ಎಲ್ಲರಿಗೂ ಸಮಾವೇಶಕ್ಕೆ ಸ್ವಾಗತ ಎಂದರು.

ಡಾ.ಅಂಬೇಡ್ಕರ್, ಗಾಂಧಿ, ನೆಹರೂ ಮತ್ತು ಕಾಂಗ್ರೆಸ್ಸಿನ ಹೋರಾಟದ ಚರಿತ್ರೆಯನ್ನು ನಾವು ಮುಂದಿನ ಪೀಳಿಗೆಗೆ ಅರ್ಥ ಮಾಡಿಸಬೇಕಿದೆ, ನಾವು ಗಾಂಧಿ ವಂಶಸ್ಥರು, ಅವರು ಗೋಡ್ಸೆ ವಂಶಸ್ಥರು, ಬಿಜೆಪಿ ಮತ್ತು ಕಾಂಗ್ರೆಸ್‌ನ ಈ ಸೈದ್ಧಾಂತಿಕ ವ್ಯತ್ಯಾಸವನ್ನು ಇವತ್ತಿನ ಯುವಪೀಳಿಗೆಗೆ ಅರ್ಥೈಸಬೇಕಿದೆ, ಇದಕ್ಕಾಗಿ ಜನವರಿ 21ರ ಗಾಂಧಿ ಭಾರತ ಸಮಾವೇಶವನ್ನು ಅತ್ಯಂತ ಯಶಸ್ವಿಗೊಳಿಸೋಣ ಎಂದರು.

**ಕಮರ್ಷಿಯಲ್ ಕಾಂಪ್ಲೆಕ್ಸ್ ಬಾಡಿಗೆಗೆ ಇದೆ**



ಎ.ವಿ.ಕೆ. ಕಾಲೇಜ್ ರಸ್ತೆ, ಶ್ರೀರಾಮ ಪಾರ್ಕ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.

ನೆಲ ಮಹಡಿ, 1ನೇ ಮಹಡಿ, 2ನೇ ಮಹಡಿ ಬಾಡಿಗೆಗಿವೆ

ಫೋನ್ : 99640 13041

**REQUIRED**

**Accountant, System Administrator & Floor Manager**

Interested Candidates Can Contact :
91646 28481, 86185 56109, 90609 13169
**Hi-Tech Clinical Laboratories (HCL)**
SS Speciality Clinic, Modi Compoud,
MCC `A' Block, Davanagere - 577002

**IN THE COURT HON'BLE SENIOR CIVIL JUDGE & JMFC AT JAGALURU**

C. Misc., No. 12/2022

**PETITIONERS :** KUM. ASHA & ORS. **- VERSES -**
**RESPONDENTS:** SMT. SHARADHA & ORS.
**RESPONDENT No. 05** : SMT. RENUKAMMA W/o Anandappa, aged about 60 years, R/o Yeralakatte village, JagaluruTq., Davanagere Dist.
**RESPONDENT No. 11 :** SRI. HANUMANTHAPPA, S/o Shivappala Shivappa, aged about 52 years, R/o Yaralakatte village, Jagaluru Taluk, Davanagere Dist.

**SUMMONS/NOTICE UNDER ORDER-V RULE-20 OF C.P.C.**

Whereas petitioners have filed the above petition against you people by seeking restoration of O. S. No. 120/2019 and also such other reliefs before the Hon'ble Senior Civil Judge & JMFC at Jagaluru, in Civil Misc., No. 12/2022 you Respondents No. 05 and 11 are hereby directed to appear in this court in persons or by Advocate on 22/1/2025 fore noon at 11.00 a.m. to defend yourself, failing which the suit will be heard and determined in your absence/Ex-parte.

Given under my hand and seal of this court on 30 day of December-2024.

By order of Court
**K.G.K. SWAMY**
**S. G. MAHAVEER**
Advocates for Petitioner
***'Law solutions'*** # 417/4A, 4B,
1st Floor, Benaka Plaza, Dixit Road,
K. B. Extension, Davanagere-1.

**Chief Ministerial officer,**
**Principal Sr.,**
**Civil Judge & CJM**
**Davanagere.**

**IN THE COURT HON'BLE III ADDL., SENIOR CIVIL JUDGE & JMFC AT DAVANAGERE**

FDP No. 49/2018

**PETITONERS :** 1. SMT. TUNGAMMA W/o late Obalappa, Aged about 78 years, R/o Nerligi village, Anagodu Hobli Davanagere.
2. SMT. PARVATHI W/o K. J. Prakash, Aged about 49 years, R/o Kodihalli village, Hasan Dist. **- VERSES -**
**RESPONDENTS :** SRI. BHEEMAPPA [Since dead by LR's]
**RESPONDENT No. 5 :** SMT. SAKAMMA D/o late Bheemappa Nerligi village, Anagodu Hobli, Davanagere Tq., & Dist.

**SUMMONS/NOTICE UNDER ORDER-V RULE-20 OF C.P.C.**

Whereas petitioners has filed the above petition against you Respondent No. 5 and such other persons by seeking Final Decree based on Preliminary Decree passed in O.S. No. 115/2011 before the Hon'ble II Additional Senior Civil Judge & JMFC at Davanagere You Respondent No. 5 is hereby directed to appear in this court in persons or by Advocate on 30-01-2025 forenoon at 11.00 am. to defend yourself, failing which the suit will be heard and determined in your absence/Ex-parte.

Given under my hand and seal of this court on 20 day of December 2024.

**K.G.K. SWAMY**
**S. G. MAHAVEER**
Advocates
***'Law solutions'*** # 417/4A, 4B,
1st Floor, Benaka Plaza, Dixit Road,
K. B. Extension, Davanagere-1.

**By order of Court**
**(Shankar Murthi)**
**Chief Ministerial officer,**
**Principal Sr., Civil Judge**
**& CJM Davanagere.**

## ಎಸ್ಸೆಸ್ ಭೇಟಿ ಮಾಡಿದ ಕಿರುವಾಡಿ ಸೋಮಣ್ಣ



ಬೆಂಗಳೂರು, ಜ. 13 - ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರನ್ನು ಇಲ್ಲಿನ ಅವರ ನಿವಾಸದಲ್ಲಿ ದಾವಣಗೆರೆ ಆಯಿಲ್ ಮಿಲ್ ಅಸೋಸಿಯೇಷನ್ ಗೌರವ ಕಾರ್ಯದರ್ಶಿ, ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾ ಸಭಾ ಜಿಲ್ಲಾ ಉಪಾಧ್ಯಕ್ಷ, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ನಿರ್ದೇಶಕ ಕಿರುವಾಡಿ ಸೋಮಣ್ಣ, ಬೊಮ್ಮೇನಹಳ್ಳಿ ರಾಮಣ್ಣ, ಕುಕ್ಕುವಾಡ ಸುರೇಂದ್ರಪ್ಪ, ಕರೇಶಿವಪ್ಪ ಸಿದ್ದೇಶ್ ಅವರುಗಳು ಭೇಟಿ ಮಾಡಿ ಯೋಗಕ್ಷೇಮ ವಿಚಾರಿಸಿದರು.

## ಡಿವಿಎಸ್ ಪದವಿ ಪೂರ್ವ ಕಾಲೇಜು, ಸಮರ್ಥ ಮೆಡಿಕಲ್ ಅಕಾಡೆಮಿಗೆ ಮಾನ್ಯತೆ ಇಲ್ಲ

ದಾವಣಗೆರೆ, ಜ. 13 - ನಗರದ ಡಿಸಿಎಂ ಬಡಾವಣೆಯಲ್ಲಿನ ಡಿವಿಎಸ್ ಪದವಿ ಪೂರ್ವ ಕಾಲೇಜು ಮತ್ತು ಸಮರ್ಥ ಮೆಡಿಕಲ್ ಅಕಾಡೆಮಿಗೆ ಇಲಾಖೆಯಿಂದ ಮಾನ್ಯತೆ ನೀಡಿರುವುದಿಲ್ಲ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ ತಿಳಿಸಿದ್ದಾರೆ. ಈ ಸಂಸ್ಥೆಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಬಾರದು ಎಂದು ಅವರು ಪೋಷಕರಿಗೆ ಕರೆ ನೀಡಿದ್ದಾರೆ. ಕ್ರಮ ಕೈಗೊಳ್ಳಲು ಕೆಟಿಜೆ ನಗರ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.




**ಕಛೇರಿ ಉಪಯೋಗಕ್ಕಾಗಿ ವಾಣಿಜ್ಯ ಕಟ್ಟಡ ಬಾಡಿಗೆಗಿದೆ**

ಲಿಫ್ಟ್, ಪ್ರತೀ ಫ್ಲೋರ್‌ಗೂ ವಾಷ್ ರೂಂ, 24 ಗಂಟೆ ನೀರಿನ ಸೌಕರ್ಯವಿರುವ, ವಾಣಿಜ್ಯ ಉಪಯೋಗದ ವಿದ್ಯುತ್ ಸೌಲಭ್ಯವುಳ್ಳ 5080 ಚ.ಅಡಿ ಅಳತೆಯ ಹೊಸದಾಗಿ ಕಟ್ಟಿರುವ 3 ಅಂತಸ್ತಿನ ವಾಣಿಜ್ಯ ಕಟ್ಟಡ ದಾವಣಗೆರೆ ನರಸರಾಜ ರಸ್ತೆಯಲ್ಲಿ ಕಛೇರಿ ಉಪಯೋಗಕ್ಕೆ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ :

ಮೊ. 94812 62505


**ಪುರಸಭಾ ಕಾರ್ಯಾಲಯ, ಚನ್ನಗಿರಿ.**

(ದಾವಣಗೆರೆ ಜಿಲ್ಲೆ)

ಫೋ:08189–228021, www.channagiritown.mrc.gov.in
**E-mail:**ka.channagiri.tmc@gmail.com

ಕ್ರಮಾಂಕ: ಚ.ಪು/ನಗರೋತ್ಥಾನ/ಶೇ 5%/ಸಿಆರ್/01/2024–25
ದಿನಾಂಕ:08–01–2025

**ಸಾರ್ವಜನಿಕ ಪ್ರಕಟಣೆ–3**

ಈ ಮೂಲಕ ಚನ್ನಗಿರಿ ಪುರಸಭಾ ವ್ಯಾಪ್ತಿಯಲ್ಲಿನ ಅರ್ಹ ಫಲಾನುಭವಿಗಳಿಗೆ ತಿಳಿಯಪಡಿಸುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ರ ಅಡಿ ವಿಶೇಷ ಚೇತನರಿಗೆ ಈ ಕೆಳಗಿನ ವಿವಿಧ ಸೌಲಭ್ಯ ಮತ್ತು ತರಬೇತಿಯನ್ನು ಉಚಿತವಾಗಿ ನೀಡಲು ಚನ್ನಗಿರಿ ಪಟ್ಟಣದ ವ್ಯಾಪ್ತಿಯಲ್ಲಿನ ಖಾಯಂ ನಿವಾಸಿಗಳಿರುವವರು ಹಾಗೂ ಆಸಕ್ತಿಯುಳ್ಳ ಅರ್ಹ ಫಲಾನುಭವಿಗಳು ಈ ಪ್ರಕಟಣೆ ಮತ್ತು ತರಬೇತಿಯನ್ನು ಉಚಿತವಾಗಿ ನೀಡಲು ಪುರಸಭಾ ಕಾರ್ಯಾಲಯದಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರಯುಕ್ತ ಚನ್ನಗಿರಿ ಪಟ್ಟಣದ ಖಾಯಂ ನಿವಾಸಿಗಳಿರುವವರು ಹಾಗೂ ಆಸಕ್ತಿಯುಳ್ಳ ಅರ್ಹ ಫಲಾನುಭವಿಗಳು ಈ ಪ್ರಕಟಣೆ ಪ್ರಕಟಗೊಂಡ ದಿನದಿಂದ 08 ದಿನಗಳ ಒಳಗಾಗಿ ಕಛೇರಿಯ ಸಂಬಂಧಿಸಿದ ಶಾಖೆಯಲ್ಲಿ ಉಚಿತವಾಗಿ ಅರ್ಜಿಯನ್ನು ಪಡೆದು ದಿನಾಂಕ: 18–01–2025 ರ ಒಳಗಾಗಿ ಸಂಬಂಧಿಸಿದ ದಾಖಲೆಗಳೊಂದಿಗೆ ಕಛೇರಿಗೆ ಸಲ್ಲಿಸಲು ತಿಳಿಸಿದೆ.

**ವಿಶೇಷ ಚೇತನ ನಿರುದ್ಯೋಗಿ ಯುವಕ/ ಯುವತಿಯರಿಗೆ ಸ್ವಯಂ ಉದ್ಯೋಗದ ಕಲ್ಯಾಣ ಕಾರ್ಯಕ್ರಮಗಳು**

| ಸೌಲಭ್ಯ/ತರಬೇತಿ ವಿವರ | ಸಲ್ಲಿಸಬೇಕಾದ ದಾಖಲೆಗಳು |
|---|---|
| ಪಟ್ಟಣದ ವ್ಯಾಪ್ತಿಯಲ್ಲಿನ ವಿಶೇಷ ಚೇತನರ ಕಲ್ಯಾಣಕ್ಕಾಗಿ ನಿರುದ್ಯೋಗಿ ಯುವಕ/ ಯುವತಿಯರಿಗೆ ಕಂಪ್ಯೂಟರ್ ತರಬೇತಿ ನೀಡಿ ಲ್ಯಾಪ್‌ಟ್ಯಾಪ್,ಕಂಪ್ಯೂಟರ್‌ಗಳನ್ನು ನೀಡುವುದು. | 1) ಎಂಬಿಬಿಎಸ್, ಬಿಇ, ಬಿಎಸ್‌ಇ, ಬಿಕಾಂ, ಎಂಕಾಂ, ಎಂಎ, ಬಿಎ ಅಂಕ ಪಟ್ಟಿ 2) ಜಾತಿ/ಆದಾಯ ಪ್ರಮಾಣ ಪತ್ರ ಆಧಾರ್ ಕಾರ್ಡ್ 3) ಚುನಾವಣಾ ಗುರುತಿನ ಚೀಟಿ 3) ರೇಷನ್ ಕಾರ್ಡ್ 4) ನಿವಾಸಿ ದೃಢೀಕರಣ ಪತ್ರ 5) ಭಾವಚಿತ್ರ |

ಸಹಿ/– **ಆಡಳಿತಾಧಿಕಾರಿಗಳು,**
ಪುರಸಭೆ, ಚನ್ನಗಿರಿ.

ಸಹಿ/–**ಮುಖ್ಯಾಧಿಕಾರಿಗಳು,**
ಪುರಸಭೆ, ಚನ್ನಗಿರಿ

ವಾಸಾಇ/ದಾವಣಗೆರೆ/643/ಕೆಎಸ್‌ಎಂಸಿಎ/2024–25

# ಎಳ್ಳು ಬೀರುವ ಹಬ್ಬ ಸಂಕ್ರಾಂತಿ

ಈಗಿನ ಕಾಲದಲ್ಲಿ ಒಬ್ಬರ ಮನೆಗೆ ಒಬ್ಬರು ಹೋಗಬೇಕೆಂದರೆ, ಕರೆ ಮಾಡಿ ಮನೆಯಲ್ಲಿದ್ದೀರಾ ಎಂದು ಕೇಳಿ ಹೋಗಬೇಕು. ಅಂತಹ ಸಮಯದಲ್ಲಿ ಎಳ್ಳು ಬೀರುವ ಹಬ್ಬ ಅಥವಾ ಸಂಕ್ರಾಂತಿಯ ದಿನ, ಎಲ್ಲರ ಮನೆಯ ಬಾಗಿಲುಗಳು ತೆರೆದಿರುತ್ತವೆ. ಎಳ್ಳು ಬಾಳೆಹಣ್ಣು, ಸಕ್ಕರೆ ಅಚ್ಚು, ಕಬ್ಬು ಹಿಡಿದು ಎಳ್ಳು ಬೀರಲು ಬರುವ ಮಕ್ಕಳು, ಹೆಂಗೆಳೆಯರನ್ನು ಸ್ವಾಗತಿಸುತ್ತವೆ.

ಹಬ್ಬ ಎಂದರೆ ಯಾವುದಾದರೂ ಒಂದು ದೇವರನ್ನು ವಿಶೇಷವಾಗಿ ಪೂಜಿಸುವ ಸಂಪ್ರದಾಯವಿರುತ್ತದೆ. ಆದರೆ, ಸಂಕ್ರಾಂತಿಯ ದಿನ ಮುಖ್ಯವಾಗಿ ಸೂರ್ಯನ ಪಥ ಬದಲಾಗುತ್ತಿದೆ ಎಂದು ಸಂಭ್ರಮಿಸುವಂತಹ ಕಾಲ. ಚಳಿ ಹೆಚ್ಚಿರುವ ಈ ಸಮಯದಲ್ಲಿ ದೇಹಕ್ಕೆ ಶಾಖವನ್ನು ಕೊಡುವ ಎಳ್ಳು ಕಡಲೆ ಬೀಜ, ಬೆಲ್ಲ ಎಲ್ಲವೂ ಆರೋಗ್ಯಕರ.

ಈ ಮಾಸದಲ್ಲಿ ಚೆನ್ನಾಗಿ ಬೆಳೆ ಬಂದು ಕಬ್ಬು ಬೇಕಾದಷ್ಟು ಸಿಗುತ್ತಿರುತ್ತದೆ. ಆದ್ದರಿಂದ ಬೆಲ್ಲ ಸಕ್ಕರೆಗಳಿಗೆ ತೊಂದರೆ ಇರುವುದಿಲ್ಲ! ಸಕ್ಕರೆಯ ಪಾಕವನ್ನು ಹದವಾಗಿ ಮಾಡಿ ಅಚ್ಚುಗಳೊಳಗೆ ಸುರಿದು ಸುಂದರ ಆಕೃತಿಗಳು ಮೂಡಿಬರುವುದನ್ನು ನೋಡುವುದೇ ಮನಸ್ಸಿಗೆ ಆನಂದವಲ್ಲವೇ. ಮನೆ ಮಂದಿ ಎಲ್ಲ ಕೂತು, ಮರದ ಅಚ್ಚುಗಳನ್ನು ತೊಳೆಯುವವರು ಒಬ್ಬರಾದರೆ, ಅದನ್ನು ಒರೆಸಿ, ಅದರ ಜೋಡಿಯೊಂದಿಗೆ ಸೇರಿಸಿ ಕಟ್ಟುವವರು ಒಬ್ಬರು. ಪಾಕವನ್ನು ಹದವಾಗಿ ಕಾಯಿಸಿ ಚೆನ್ನಾಗಿ ತಿಕ್ಕಿ, ಸರಿಯಾದ ಹದಕ್ಕೆ ಅದನ್ನು ಸುರಿಯಬೇಕು. ತಿಳಿಯಾದ ಪಾಕ ಒಂದೇ ನಿಮಿಷದಲ್ಲಿ ಬಿಳಿ ಸಕ್ಕರೆ ಅಚ್ಚಾಗುವುದನ್ನು ನೋಡುವುದೇ ಕಣ್ಣಿಗೆ ಹಬ್ಬ. ಸಣ್ಣ ಮಕ್ಕಳಿಗಂತೂ ಸಂತೋಷವೋ ಸಂತೋಷ. ಮುರಿದ ಬಿಸಿ ಅಚ್ಚುಗಳನ್ನು ತಿನ್ನುವುದರಲ್ಲೂ ಒಂದು ವಿಶೇಷವಾದ ಆನಂದ.

ಹೀಗೆ ಸಂಕ್ರಾಂತಿ ಹಬ್ಬ ಬರುವ 15 ದಿನಗಳ ಮೊದಲಿನಿಂದಲೇ, ಮನೆಯಲ್ಲಿ ಬೆಲ್ಲ, ಕೊಬ್ಬರಿ ಹೆಚ್ಚುವುದು, ಕಡಲೆಬೀಜ ಹುರಿದು ಅದರ ಸಿಪ್ಪೆ ತೆಗೆದು ಬೆಳ್ಳಗೆ ಮಾಡುವುದು, ಹೆಚ್ಚಿದ ಬೆಲ್ಲ ಬಿಸಿಲಿನಲ್ಲಿ ಒಣಗಿಸುವುದು, ಎಲ್ಲವೂ ನಡೆಯುತ್ತಿರುತ್ತದೆ. ಮನೆಯಲ್ಲಿ ಹಬ್ಬದ ಸಂಭ್ರಮ ಶುರುವಾಗಿರುತ್ತದೆ.

ಬಂಧು ಬಾಂಧವರಿಗೆ, ಆತ್ಮೀಯರಿಗೆ, ಅಕ್ಕಪಕ್ಕದ ಮನೆಯವರಿಗೆ ಸ್ನೇಹಿತರಿಗೆ, ಪರಿಚಿತರಿಗೆ, ಅಪರಿಚಿತರಿಗೆ ಎಲ್ಲರಿಗೂ ಎಳ್ಳನ್ನು ಕೊಟ್ಟು, 'ಎಳ್ಳು ಬೆಲ್ಲ ತಿಂದು ಒಳ್ಳೆ ಮಾತನಾಡಿ' ಎಂದು ಹೇಳುವ ಈ ಸಂಪ್ರದಾಯ ಎಷ್ಟು ಹಿರಿದಾದುದಲ್ಲವೇ?

ಮಾನವೀಯ ಮೌಲ್ಯವಾದ ಎಲ್ಲರನ್ನೂ ಪ್ರೀತಿಸುವ ಎಲ್ಲರನ್ನೂ ಬಂಧು- ಬಾಂಧವರಂತೆ ಕಾಣುವ, ಎಲ್ಲರಿಗೂ ಸಿಹಿ ಹಂಚುವ ಈ ಹಬ್ಬ 'ವಸುದೈವಕುಟುಂಬಕಂ' ಎಂಬ ಘೋಷಣೆಗೆ ಸಾಕಾರರೂಪವಾಗಿದೆ.

ಎಳ್ಳಿಗೆ ತುಂಬಾ ಮಹತ್ವವಿದೆ. ವರಾಹ ರೂಪದಲ್ಲಿ ಭಗವಂತನು ಬಂದಾಗ ಅವನ ಬೆವರ ಹನಿಯಿಂದ ಎಳ್ಳಾಯಿತು ಎಂಬ ನಂಬಿಕೆ ಇದೆ. ಪಿತೃ ಕಾರ್ಯಗಳಿಗೆ ಹೆಚ್ಚಾಗಿ ಉಪಯೋಗಿಸುವ ಈ ಕರಿ ಎಳ್ಳು, ಸಂಕ್ರಾಂತಿ ಹಬ್ಬದಲ್ಲಿ ಬಿಳಿ ಬಣ್ಣದ್ದಾಗಿ ಅತ್ಯಂತ ಪ್ರಮುಖವಾಗುತ್ತದೆ. ಎಳ್ಳಿನ ದೀಪ ಹಚ್ಚಿ, ಎಳ್ಳಿನ ತರ್ಪಣ ಕೊಟ್ಟು, ಎಳ್ಳಿನ ಸ್ನಾನ ಮಾಡಿ, ಎಳ್ಳು ದಾನ ಮಾಡಿ, ಹೋಮ ಮಾಡಿ ಅದನ್ನು ಭಕ್ಷಿಸಬೇಕು. ಎಂದು ಆರು ರೀತಿಯಲ್ಲಿ ಎಳ್ಳು ಬಳಸುತ್ತಾರೆ.

ಎಳ್ಳಿನ ನಾರಿನಂಶ ಜೀರ್ಣಕಾರಿ, ಅದರಲ್ಲಿನ ಕ್ಯಾಲ್ಸಿಯಂ, ಪೊಟಾಶಿಯಂ ಮತ್ತು ಕೆಲವು ಅಮೈನೋ ಆಮ್ಲಗಳು ದೇಹಕ್ಕೆ ಬಹು ಮುಖ್ಯ. ಎಳ್ಳು ಉರಿಯೂತ ಕಡಿಮೆ ಮಾಡುತ್ತದೆ.

ಸಂಕ್ರಾಂತಿ ದಿನ ಸೂರ್ಯ ಧನು ರಾಶಿಯಿಂದ ಮಕರ ರಾಶಿಗೆ ಹೋಗುವುದರಿಂದ, ಮಕರ ಸಂಕ್ರಾಂತಿ ಎಂದು ಕರೆಯುತ್ತಾರೆ. ಮಕರ ರಾಶಿಯ ಅಧಿಪತಿ ಶನಿ ದೇವರಾಗಿರುವುದರಿಂದ, ಎಳ್ಳು ಶನಿ ದೇವರಿಗೆ ಅತಿಪ್ರಿಯವಾಗಿರುವುದರಿಂದ, ಎಳ್ಳು ದಾನ ಕೊಡುತ್ತಾರೆ.

ಈ ಹಬ್ಬದ ಇನ್ನೊಂದು ಮುಖ್ಯವಾದ ಸಂದೇಶವೆಂದರೆ, ಬಾಳಿನಲ್ಲಿ ಬರುವ ಸಿಹಿ ಕಹಿ ಎರಡನ್ನೂ ಸಮವಾಗಿ ಸ್ವೀಕರಿಸುವುದು. 'ಸುಖೆ, ದುಃಖೇ ಸಮೇ ಕೃತ್ವ ಲಾಭಾ ಲಾಭೌ ಜಯಾ ಜಯೌ' ಎಂದು ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಹೇಳುತ್ತಾನೆ. ಇದು ಹೇಳಿದಷ್ಟು ಸುಲಭವಲ್ಲ. ಆದರೂ ಎಲ್ಲರ ಜೀವನದಲ್ಲೂ ಸುಖದ ಹಿಂದೆ ದುಃಖ ಇದ್ದೇ ಇರುತ್ತದೆ. ಇದನ್ನು ನೆನಪಿಟ್ಟುಕೊಂಡು ಸುಖ ಬಂದಾಗ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ ಎರಡನ್ನೂ ಅನುಭವಿಸಿ ಎಂದೇ ಎಳ್ಳು ಬೆಲ್ಲಗಳನ್ನು ಒಟ್ಟಿಗೆ ದಾನ ಕೊಡುವ, ಒಟ್ಟಿಗೆ ತಿನ್ನುವ ಸಂಪ್ರದಾಯವಿದೆ.

ಎಳ್ಳು ಬೀರುವ ಸಲುವಾಗಿ ಎಲ್ಲರ ಮನೆಗಳಿಗೂ ಹೋಗುವುದರಿಂದ, ಏನಾದರೂ ಮಾತಿನಲ್ಲಿ ಅಥವಾ ಕಾರ್ಯದಲ್ಲಿ ಅವರ ಮನಸ್ಸಿಗೆ ನೋವಾಗಿದ್ದರೂ, ಈ ಹಬ್ಬ ಎಲ್ಲರನ್ನೂ ಒಟ್ಟುಗೂಡಿಸಿ ಕಹಿಯನ್ನು ಮರೆಸಿ ಸಿಹಿಯನ್ನು ಮಾತ್ರ ನೆನಪಿಟ್ಟುಕೊಳ್ಳುವಂತೆ ಮಾಡುತ್ತದೆ. ಸ್ನೇಹ ಬಾಂಧವ್ಯ ಆತ್ಮೀಯತೆ ಹೆಚ್ಚಿಸುತ್ತದೆ.



## ಸಂಕ್ರಾಂತಿ ಶುಭಾಶಯಗಳು

ಬನ್ನಿ ಬನ್ನಿ ಎಳ್ಳು ತನ್ನಿ ಸಂಕ್ರಾಂತಿ ಬಂದಿದೆ
ಬನ್ನಿ ಬನ್ನಿ ಎಲ್ಲ ಸೇರೋ ಪರ್ವವು ಇದಾಗಿದೆ

ಬನ್ನಿ ಬನ್ನಿ ಪ್ರೀತಿ ತನ್ನಿ ದ್ವೇಷ ಬಿಡಿ ಎಂದಿದೆ
ಬನ್ನಿ ಬನ್ನಿ ಎಲ್ಲ ಸೇರಿ ಸಂಭ್ರಮಿಸುವ ಎಂದಿದೆ

ಸಿಹಿ ಬೆಲ್ಲ ಕಹಿ ಎಳ್ಳು ಸೇರಿ ಎಷ್ಟು ರುಚಿ ಇದೆ
ಸಿಹಿಯ ಹಿಂದೆ ಕಹಿ ಎಂದು ನೆನಪಿರಲಿ ಎಂದಿದೆ

ಕಹಿ ಇರದ ಸಿಹಿಯ ಮಾತನಾಡು ನೀನು ಎಂದಿದೆ
ಕಹಿ ನೋವಿನ ಸಮಯದಲ್ಲಿ ಕೈಯ ಹಿಡಿ ಎಂದಿದೆ

ಅಚ್ಚಿನ ಮಣೆಯಂತೆ ಸಕ್ಕರೆ ಅಚ್ಚು ಆಗಿದೆ
ಸ್ವಚ್ಛ ಸುಂದರ ಮನವಿದ್ದರೆ ಬಾಳು ಸುಂದರ ಎಂದಿದೆ

ಹೆಚ್ಚು ಹೆಚ್ಚು ಹಂಚು ನೀನು ಪ್ರೀತಿಯನ್ನು ಎಂದಿದೆ
ಹಚ್ಚಿಕೊಂಡರೆ ಎಲ್ಲರನ್ನು ಜಗವು ನಿನ್ನದೆ ಎಂದಿದೆ

ಉತ್ತರಾಯಣ ಪರ್ವಕಾಲ ದಾನ ಮಾಡು ಎಂದಿದೆ
ಉತ್ತಮ ಸಿರಿಹರಿಯ ನಂಬಿ ಬಾಳು ನೀನು ಎಂದಿದೆ.

ಮನುಷ್ಯ ಸಮಾಜ ಜೀವಿ. ಒಬ್ಬರೇ ಇದ್ದರೆ ಒಂಟಿತನದ ನೋವೆಷ್ಟು ಎಂದು ತಿಳಿಯುತ್ತದೆ. ಮನಸ್ಸಿನ ಮಾತುಗಳನ್ನು ಆಡಲು ಕೂಡ ಯಾರೂ ಜೊತೆಗೆ ಇರುವುದಿಲ್ಲ.

ಇಂತಹ ಕಷ್ಟಗಳು ಎಂದೂ ನಮಗೆ ಬರದಿರಲಿ. ಎಲ್ಲರೊಟ್ಟಿಗೆ ಸಂಭ್ರಮ, ಸಡಗರದಿಂದ ಹಬ್ಬಗಳನ್ನು ಆಚರಿಸುತ್ತಾ, ರುಚಿಯಾದ ಎಳ್ಳು, ಬೆಲ್ಲ, ಸಕ್ಕರೆ ಅಚ್ಚು ತಿನ್ನುತ್ತಾ ಸಂಕ್ರಾಂತಿ ಹಬ್ಬವನ್ನು ಆಚರಿಸೋಣ ಎಂದು ಪ್ರಾರ್ಥಿಸುತ್ತೇನೆ.

**- ಡಾ. ರೂಪಶ್ರೀ ಶಶಿಕಾಂತ್**, ದಾವಣಗೆರೆ.

## ಸಂಕ್ರಾಂತಿ..

ಸೂರ್ಯನು ದಕ್ಷಿಣದಿಂದ ಉತ್ತರಕ್ಕೆ ಪಥ
ಬದಲಿಸುವ ಘಳಿಗೆ
ಸಂಕ್ರಾಂತಿಯ ಸಂಭ್ರಮವು ಧರೆಗೆ
ಮನವು ಮೌನವಾಗುವುದು ಪ್ರಕೃತಿಯ
ಸೊಬಗಿಗೆ
ಈ ದಿನವು ಮೀಸಲು ಪ್ರಕೃತಿಯ ಪೂಜೆಗೆ

ಎಳ್ಳು ಬೆಲ್ಲದ ಸಿಹಿ ನೈವೇದ್ಯ
ಒಳ್ಳೆಯ ಮಾತುಗಳೇ ಬದುಕಿನ ಖಾದ್ಯ
ರೈತನಿಗಿದು ಸುಗ್ಗಿಯ ಸೊಬಗು
ವರ್ಷದ ಮೊದಲ ಹಬ್ಬದ ಬೆರಗು

ವಿವಿಧತೆಯಲ್ಲೂ ಐಕ್ಯತೆ
ಬೇರೆ ಬೇರೆ ರಾಜ್ಯದೊಂದಿಗೆ ಬೆಸೆದ ಭಾವೈಕ್ಯತೆ
ಬಂಧ ಅನುಬಂಧಗಳ ಸಂಕೇತ
ಹೊಸ ಜೀವನಕ್ಕೆ ಹಾಕುವುದು ಅಂಕಿತ

ನಮ್ಮೊಳಗಿನ ದ್ವೇಷವ ಕಳೆದು
ಪ್ರೀತಿ ಪ್ರೇಮಗಳ ಪೈರನು ಬೆಳೆದು
ನಗುತ ನಲಿಯುತ ಬಾಳೋಣ
ಸಂತಸದಿ ನಗುವ ಬೀರೋಣ ..

**-ಬಸವರಾಜ ಕರುವಿನ ಬಸವನಾಳು**

## ಸಂಕ್ರಾಂತಿ ಸಂಭ್ರಮ

ತಂದಾನಿ ತಾನೋ ತಾನಿ ತಂದಾನೋ
ಸುಗ್ಗಿಯ ಕಾಲ ಬಂದಿದೆ ನೋಡಣ್ಣ
ಹಿಗ್ಗುತ ನಲಿಯೋಣ ಬಾರಣ್ಣ
ಜಗದ ಬೆಳಕು ರವಿಯ ನಮಿಸುತ
ಹಿಗ್ಗಿ ಹಿಗ್ಗಿ ಪೊಂಗಲ್ ಸವಿಯೋಣ

ಎಳ್ಳು ಬೆಲ್ಲ ಹಂಚುವ ಬಾರಾ
ಒಳ್ಳೆ ಮಾತಾ ಆಡುವ ಬಾರಾ
ಎಲ್ಲಾ ಸೇರಿ ಒಂದಾಗಿ
ಒಲವಿಂದ ಗೆಲುವಿಂದ ನಲಿಯೋಣ ಬಾರಾ

ಮಕರಕ್ಕೆ ಬರುವ ರವಿ
ಉತ್ತರಾಯಣಕೆ ಮುನ್ನಡಿ ಇಡುವ
ಸರ್ವರಿಗೆ ಸುಖ ಶಾಂತಿ ಈವಾ
ಕೃಪಾಳು ಮುದ್ದು ಬಾಲಕೃಷ್ಣ ಕಾವ

ಹೊಸ ವರುಷ ಹೊಸ ಸಂಭ್ರಮ
ಕುಸುರಿ ಕಬ್ಬಿನ ಸಡಗರ
ಚಿಕ್ಕ ಮಕ್ಕಳಿಗೆ ತನಿ ಎರದು
ಅಕ್ಕರೆಯಿಂದ ಅವರೊಡನೆ ನಾವು ನಲಿಯೋಣ ಬಾರಾ

**-ಕೋಮಲ ವಿ. ಕುಮಾರ್**, ದಾವಣಗೆರೆ.

# ಮಕರ ಸಂಕ್ರಾಂತಿ - ಪರಿಸರ ಸ್ನೇಹಿ ಸಂತೆ



ದಾವಣಗೆರೆ, ಜ.13- ಡಾ. ಶಾಮನೂರು ಶಿವಶಂಕರಪ್ಪ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಸೋಮವಾರದಂದು 'ಮಕರ ಸಂಕ್ರಾಂತಿ-ಪರಿಸರ ಸ್ನೇಹಿ ಸಂತೆಯನ್ನು ಸಂಭ್ರಮದಿಂದ ಆಚರಿಸಿದರು. ವಿದ್ಯಾರ್ಥಿಗಳು ಹಾಡು, ನೃತ್ಯವನ್ನು ಪ್ರದರ್ಶನ ಮಾಡಿದರು. ಸಂಕ್ರಾಂತಿ ಸಂತೆಯಲ್ಲಿ ಸಾಂಸ್ಕೃತಿಕ ಗ್ರಾಮದ ವೈಭವ, ಪರಿಸರ ಸಂತೆ, ಆಟಗಳು ಮತ್ತು ಇತರೆ ಸ್ಪರ್ಧೆಗಳು ನಡೆದವು. ಶಾಲೆಯ ಮಕ್ಕಳು ಮತ್ತು ವಿದ್ಯಾರ್ಥಿಗಳು ಎಳ್ಳು-ಬೆಲ್ಲ ಹಂಚಿ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಈ ವೇಳೆ ಪ್ರಾಚಾರ್ಯೆ ಕಮಲ ಬಿ. ನಾರಾಯಣ, ಉಪ ಪ್ರಾಚಾರ್ಯ ರಮೇಶ್ ಬಾಬು, ಆಡಳಿತಾಧಿಕಾರಿ ಎಸ್. ಅಜಯ್, ಸಂಯೋಜಕರಾದ ರುತಿಕಾ, ಬಾಪೂಜಿ ಸಂಸ್ಥೆಯ ಡೀನ್ ಮಂಜುನಾಥ್ ರಂಗರಾಜು ಮತ್ತು ಶಾಲೆಯ ಸಿಬ್ಬಂದಿ ಇದ್ದರು.

# ಪಾನಮುಕ್ತಗೊಳಿಸಲು ಜನರ ಮನಃ ಪರಿವರ್ತನೆ ಅಗತ್ಯ

**(1ನೇ ಪುಟದಿಂದ)** ದುಶ್ಚಟ ದೂರವಾಗುವುದು ಕಷ್ಟಸಾಧ್ಯ. ಮಹಿಳೆ ಮನಸ್ಸು ಮಾಡಿದಲ್ಲಿ, ತನ್ನ ಇಡೀ ಸಂಸಾರ ತಪ್ಪು ದಾರಿಗೆ ಹೋಗುವುದನ್ನು ತಡೆಗಟ್ಟಲು ಸಾಧ್ಯವಿದೆ. ಹೀಗಾಗಿ ಮಹಿಳೆಯರು ಜಾಗೃತರಾಗಬೇಕು. ಈ ನಿಟ್ಟಿನಲ್ಲಿ ಬಹಳ ಹಿಂದೆಯೇ ಕೇಂದ್ರ ಸರ್ಕಾರದ ಸಂಸದೀಯ ಸದಸ್ಯರಾದ ಶ್ರೀಮತಿ ಯಶೋಧ ದಾಸಪ್ಪ ಹುಟ್ಟಿ ಹಾಕಿದ ಸಂಸ್ಥೆಯನ್ನು ದಾವಣಗೆರೆ 1987-88ರಲ್ಲಿ ವನಿತಾ ಸಮಾಜದದ ಅಂಗ ಸಂಸ್ಥೆಯಾಗಿ ಹುಟ್ಟಿಕೊಂಡ ಭಾರತೀಯ ಗ್ರಾಮೀಣ ಮಹಿಳಾ ಸಂಘ ಇದರಲ್ಲಿ ಭಾರತವನ್ನು ಪಾನಮುಕ್ತವನ್ನಾಗಿಸುವುದು ಇವರ ಮುಖ್ಯ ಉದ್ದೇಶವಾಗಿತ್ತು.

ಪಾಶ್ಚಿಮಾತ್ಯರ ಅನುಕರಣೆಯಂತೆ ಹೊಸವರ್ಷವನ್ನು ಬರಮಾಡಿಕೊಳ್ಳುತ್ತಿದ್ದ ಆ ದಿನಗಳಲ್ಲಿ ನಮ್ಮ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸಲು ಹೊಸ ವರ್ಷ ಆಚರಿಸಲು ಆರಂಭಿಸಿದರು. ಅಂತೆಯೇ ಹೊಸ ವರ್ಷವನ್ನು ಈ ರೀತಿಯಾಗಿ ಬರಮಾಡಿಕೊಳ್ಳುವುದನ್ನು ರೂಡಿಸಿಕೊಂಡು ಬರುತ್ತಾ ಪಾನಯುಕ್ತ ಹಳ್ಳಿಗಳನ್ನು ಪಾನಮುಕ್ತ ಹಳ್ಳಿಗಳನ್ನಾಗಿಸಲು ಪಣ ತೊಡೋಣ ಎಂದು ಉಮಾ ಪ್ರಶಾಂತ್ ಭಾರತೀಯ ಗ್ರಾಮೀಣ ಮಹಿಳಾ ಸಂಘವು ನಡೆದು ಬಂದ ದಾರಿಯನ್ನು ವಿವರಿಸಿ ಹೇಳಿದರು.

ಇದೇ ರೀತಿ ಪಾನಮುಕ್ತ ಹಳ್ಳಿ ನಿರ್ಮಿಸಲು ಇಲಾಖೆ ಕಡೆಯಿಂದ ಸ್ವ ಸಹಾಯ ಸಂಘಗಳಿಗೆ ಬೇಕಾದ ಅನುಕೂಲ ಮಾಡಿಕೊಡುವುದಾಗಿ ತಿಳಿಸಿದ ಎಸ್ಪಿ ಉಮಾ, ರಾಜ್ಯ ಮದ್ಯಪಾನ ಸಂಯಮ ಮಂಡಳಿಯಿಂದ ಹಲವು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಮದ್ಯವರ್ಜನೆ ಶಿಬಿರಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದು ವಿವರಿಸಿದರು.

ಭಾರತೀಯ ಗ್ರಾಮೀಣ ಮಹಿಳಾ ಸಂಘದ ಶ್ರೀಮತಿ ಗುಂಡಿ ಪುಷ್ಪ ಸಿದ್ದೇಶ್ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಪ್ರತಿ ವರ್ಷ ಹೊಸ ವರ್ಷಾಚರಣೆಯನ್ನು ಭಾರತೀಯ ಸಂಸ್ಕೃತಿಯಲ್ಲಿ ಆಚರಿಸುತ್ತಾ ಬಂದಿದ್ದು, ಪಾನಯುಕ್ತ ಹಳ್ಳಿಗಳನ್ನು ಪಾನಮುಕ್ತ ಹಳ್ಳಿಗಳನ್ನಾಗಿಸುವಲ್ಲಿ ಪಣ ತೊಟ್ಟು ವರ್ಷಕ್ಕೆ ಒಂದು ಬಾರಿ ನಡೆಸುತ್ತಿದ್ದ ಇಂತಹ ಶಿಬಿರವನ್ನು ಮುಂದಿನ ದಿನಗಳಲ್ಲಿ ಪ್ರತಿ ತಿಂಗಳು ನಡೆಸಲು ಶ್ರಮಿಸುವುದಾಗಿ ತಿಳಿಸಿದರು.

ಹೊಸ ವರ್ಷಾಚರಣೆಯಯಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ಮಂಜುಳಾ ಬಸವಲಿಂಗಪ್ಪ ಮಾತನಾಡಿದರು. ವನಿತಾ ಸಮಾಜದ ಅಧ್ಯಕ್ಷರಾದ ಪಿ.ಟಿ. ಪದ್ಮಾ ಪ್ರಕಾಶ್ ಉಪಸ್ಥಿತರಿದ್ದರು. ಶ್ರೀಮತಿ ಗೀತಾ ಬದ್ರಿನಾಥ್ ಅತಿಥಿಗಳನ್ನು ಪರಿಚಯಿಸಿದರು. ಶ್ರೀಮತಿ ಪೂರ್ಣಿಮಾ ವಂದಿಸಿದರು.

# ಟ್ರೆಂಡ್ ಆದ 'ಏಕತೆಯ ಮಹಾ ಕುಂಭ' ಹ್ಯಾಶ್‌ಟ್ಯಾಗ್

ಪ್ರಯಾಗರಾಜ್, ಜ.13- ತ್ರಿವೇಣಿ ಸಂಗಮದಲ್ಲಿ ಆರಂಭಗೊಂಡಿರುವ ವಿಶ್ವದ ಅತಿದೊಡ್ಡ ಉತ್ಸವ ಮಹಾ ಕುಂಭಮೇಳವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು 'ಏಕತೆಯ ಮಹಾ ಕುಂಭ' ಎಂದು ಬಣ್ಣಿಸಿದ್ದು, ಇದೀಗ 'Ekta_Ka_Mahakumbh' ಹ್ಯಾಶ್‌ಟ್ಯಾಗ್ ಸಾಮಾಜಿಕ ಮಾಧ್ಯಮಗಳಲ್ಲಿಟ್ರೆಂಡ್‌ಆಗಿದೆ.ಬೆಳಿಗ್ಗೆಯಿಂದಲೇ ಮಹಾ ಕುಂಭಮೇಳಕ್ಕೆ ಸಂಬಂಧಿಸಿದ ವಿಡಿಯೊ, ಫೋಟೋ ಮತ್ತು ಮಾಹಿತಿಗಳನ್ನು ಎಕ್ಸ್ ಮತ್ತು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಳ್ಳಲು ಪ್ರಾರಂಭಿಸಿರುವ ಬಳಕೆದಾರರು, ತಮ್ಮ ಪೋಸ್ಟ್ ಜೊತೆಗೆ 'Ekta_Ka_Mahakumbh' ಹ್ಯಾಶ್‌ಟ್ಯಾಗ್ ಅನ್ನು ವ್ಯಾಪಕವಾಗಿ ಬಳಸಿದ್ದಾರೆ. ಮಧ್ಯಾಹ್ನದ ವೇಳೆಗೆ ಟ್ರೆಂಡಿಂಗ್ ಚಾರ್ಟ್‌ನಲ್ಲಿ ಈ ಹ್ಯಾಶ್‌ಟ್ಯಾಗ್ ಅಗ್ರಸ್ಥಾನ ಪಡೆದುಕೊಂಡಿತ್ತು.

ಮಾಹಿತಿಯ ಪ್ರಕಾರ, ಮಧ್ಯಾಹ್ನ 3.30 ವೇಳೆಗೆ ಸುಮಾರು 70 ಸಾವಿರ ಬಳಕೆದಾರರು ಈ ಹ್ಯಾಶ್‌ಟ್ಯಾಗ್ ಅನ್ನು ಬಳಸಿಕೊಂಡು ಕುಂಭಮೇಳದಲ್ಲಿನ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

ಮಹಾಕುಂಭಮೇಳಕ್ಕೆ ಸಂಬಂಧಿಸಿದಂತೆ ಹಲವು ಹ್ಯಾಶ್‌ಟ್ಯಾಗ್‌ಗಳನ್ನು ಬಳಸಿದ್ದರೂ 'Ekta_Ka_Mahakumbh' ಹೆಚ್ಚು ಟ್ರೆಂಡ್ ಆಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಕೂಡ ಈ ಹ್ಯಾಶ್‌ಟ್ಯಾಗ್ ಬಳಸಿದ್ದು, ಅತಿ ಹೆಚ್ಚು ಜನರ ಗಮನ ಸೆಳೆದಿದೆ.

# ಬಹಿರಂಗ ಹೇಳಿಕೆ, ಪ್ರತ್ಯೇಕ ಸಭೆ ಸಹಿಸಲ್ಲ

**(1ನೇ ಪುಟದಿಂದ)** ಪಕ್ಷ ಮತ್ತು ಸರ್ಕಾರ ಮುಜುಗರಕ್ಕೆ ಒಳಗಾಗಬೇಕಾಗುತ್ತದೆ. ಅಲ್ಲದೆ, ಪ್ರತಿಪಕ್ಷ ಬಿಜೆಪಿ ಇದನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತದೆ ಎಂದು ಕಿವಿಮಾತು ಹೇಳಿದ್ದಾರೆ.

ನೀವು ಏನೇ ಮಾಡುವುದಾದರೂ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರನ್ನು ಮುಂದಿಟ್ಟುಕೊಂಡು ಮಾಡಿ, ಪಕ್ಷಕ್ಕೆ ವಿರುದ್ಧವಾಗಿ ನಡೆದುಕೊಂಡರೆ ವರಿಷ್ಠರು ತಮ್ಮದೇ ಆದ ನಿರ್ಣಯಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಬಳಿಕ ಪಕ್ಷದ ಕಚೇರಿಯಲ್ಲಿ ನಡೆದ ರಾಜ್ಯಮಟ್ಟದ ಕಾರ್ಯಕರ್ತರ ಸಭೆಯಲ್ಲೂ ಪಕ್ಷವನ್ನು ಬುಲ್ಡೋಜ್ ಮಾಡಲು ಮುಂದಾದರೆ ಸುಮ್ಮನಿರುವುದಿಲ್ಲ ಎಂದಿದ್ದಾರೆ. ನಾಯಕರ ಭಾವನೆಗಳು ಅರ್ಥವಾಗುತ್ತದೆ, ಆದರೆ, ಪಕ್ಷಕ್ಕಿಂತ ನಾವು ದೊಡ್ಡವರು ಎಂಬುದಾಗಿ ಭಾವಿಸಿಕೊಳ್ಳಬೇಡಿ.

ಶಿಸ್ತನ್ನು ಯಾರೂ ಮೀರಬಾರದು, ನಾನು, ಸಿದ್ದರಾಮಯ್ಯ, ಶಿವಕುಮಾರ್ ಸೇರಿದಂತೆ ಎಲ್ಲರೂ ಪಕ್ಷದ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಿದೆ. ಯಾರನ್ನೋ ಓಲೈಸಲು, ಯಾರನ್ನೋ ವಿರೋಧಿಸಲು ಹೋಗಿ, ಪಕ್ಷಕ್ಕಿಂತ ನಾನೇ ದೊಡ್ಡವನು ಎಂದುಕೊಂಡರೆ ಅದು ನಿಮ್ಮ ಭ್ರಮೆ. ಇಂತಹ ಭ್ರಮೆ ಇಟ್ಟುಕೊಂಡು ಹೊರಹೋದವರು ಏನೇನು ಆಗಿದ್ದಾರೆ ಎಂಬುದು ನಿಮಗೂ ತಿಳಿದಿದೆ.

ಆಯಕಟ್ಟಿನ ಜಾಗಗಳಲ್ಲಿ ಬ್ರಾಹ್ಮಣರೇ ಇದ್ದಾರೆ, ಉಳಿದವರಿಗೆ ಸರಿಯಾದ ಸ್ಥಾನಮಾನಗಳೇ ಇಲ್ಲದಂತಾಗಿದೆ, ಆರ್ಥಿಕ ದುರ್ಬಲರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಜಾತಿ ಗಣತಿ ಸಮೀಕ್ಷೆ ವರದಿ ಜಾರಿಗೆ ತರಲಾಗುತ್ತಿದೆ ಎಂದರು.

# ವಿಶ್ವದ ಅತಿದೊಡ್ಡ ಧಾರ್ಮಿಕ ಕುಂಭ ಮೇಳಕ್ಕೆ ವಿಧ್ಯುಕ್ತ ಚಾಲನೆ





**(1ನೇ ಪುಟದಿಂದ)**
ಭಾರತೀಯರಷ್ಟೇಅಲ್ಲದೇ ವಿದೇಶಗಳಿಂದಲೂ ಭಕ್ತರು ಆಗಮಿಸುತ್ತಿದ್ದಾರೆ. ಗಂಗಾ, ಯಮುನಾ, ಸರಸ್ವತಿ ನದಿಗಳ ಪವಿತ್ರ ಸಂಗಮದಲ್ಲಿ ಪುಣ್ಯಸ್ನಾನ ಮಾಡುತ್ತಾರೆ. ಇಲ್ಲಿ ಸ್ನಾನ ಮಾಡಿದರೆ ಪಾಪ ನಾಶ, ಮೋಕ್ಷ ಸಿಗುತ್ತದೆ ಎಂಬುದು ಭಕ್ತರ ನಂಬಿಕೆ.

# ಸಿ.ಸಿ. ರಸ್ತೆಗಳ ದುರಸ್ತಿ ಕಾಮಗಾರಿಯ ಪರಿಶೀಲನೆ



ದಾವಣಗೆರೆ, ಜ. 13 - ಮಹಾನಗರ ಪಾಲಿಕೆಯ ವಿವಿಧ ವಾರ್ಡ್‌ಗಳಲ್ಲಿ ಸಿ.ಸಿ. ರಸ್ತೆಗಳಲ್ಲಿ ದುರಸ್ತಿ ಪಡಿಸದೇ ಬಿಟ್ಟಿರುವ ರೋಡ್ ಕಟ್ಟಿಂಗ್ಸ್‌ಗಳನ್ನು, ಅಪ್ರೋಚ್ ರಸ್ತೆಗಳಿಗೆ ಫೇವರ್ ಅಳವಡಿಸಿ, ದುರಸ್ತಿ ಪಡಿಸುವ ಕಾಮಗಾರಿಗಳನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಹುಲ್ಮನಿ ಭೇಟಿ ನೀಡಿ ಪರಿಶೀಲಿಸಿದರು. ನಗರದ ಚಿಗಟೇರಿ ಆಸ್ಪತ್ರೆ ರಸ್ತೆ, ಕೆಟಿ.ಜೆ. ನಗರ ಮತ್ತು ವಿವಿಧ ಮುಖ್ಯರಸ್ತೆಗಳ ದುರಸ್ತಿ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಹಾಜರಿದ್ದ ಅರೋಗ್ಯ ಮತ್ತು ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷರಾದ ಆಶಾ ಉಮೇಶ್ ನಗರದ ಮುಖ್ಯರಸ್ತೆಗಳಲ್ಲಿ ಬ್ಲಾಕ್ ಸ್ಪಾಟ್‌ಗಳಲ್ಲಿ ಬಿದ್ದಿರುವ ಕಸವನ್ನು ವಿಲೇವಾರಿ ಮಾಡಲು ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿದರು. ಲೆಕ್ಕ ಪತ್ರ ಸ್ಥಾಯಿ ಸಮಿತಿ ಅಧ್ಯಕ್ಷರಾದ ಸುಧಾ ಇಟ್ಟಿಗುಡಿ ಮಂಜುನಾಥ್ ಹಾಜರಿದ್ದರು


**ಸೈಟುಗಳು ಮಾರಾಟಕ್ಕಿವೆ**
ಪಿ.ಜೆ. ಬಡಾವಣೆ ಉತ್ತರ 60x100 (ಡುಪ್ಲೆಕ್ಸ್ ಮನೆ ಸೈಟ್ ರೇಟಿಗೆ) ವಿದ್ಯಾನಗರ ಪಶ್ಚಿಮ 35x50 ವಿನಾಯಕ ಬಡಾವಣೆ, ಉತ್ತರ 40x85 ಎಂ.ಸಿ.ಸಿ. 'ಬಿ' ಬ್ಲಾಕ್, ಪಶ್ಚಿಮ 38x71 (ನರ್ಸಿಂಗ್ ಹೋಮ್‌ಗೆ ಚೆನ್ನಾಗಿದೆ)
ಐಗೂರು ವಿಜಯಕುಮಾರ್
99457 029495

**ಬೇಕಾಗಿದ್ದಾರೆ**
ರಾತ್ರಿ ಶಿಫ್ಟ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ
ಖುದ್ದಾಗಿ ಜನತಾವಾಣಿ ಕಚೇರಿಯನ್ನು ಬೆಳಿಗ್ಗೆ 12 ರಿಂದ ಸಂಜೆ 5 ಗಂಟೆಯ ಒಳಗೆ ಸಂಪರ್ಕಿಸಿ

**ಸಿದ್ಧ ಸಮಾಧಿ ಯೋಗ (SSY)**
ದಾವಣಗೆರೆ ರಾಂ ಅಂಡ್ ಕೋ ವೃತ್ತದಲ್ಲಿರುವ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ರೇಣುಕಾ ಮಾತಾಜಿ ನೇತೃತ್ವದಲ್ಲಿ 15.01.2025ರಿಂದ ಸಿದ್ಧ ಸಮಾಧಿ ಯೋಗ (SSY) ಶಿಬಿರ ಆರಂಭಗೊಳ್ಳಲಿದೆ. ಮಾಹಿತಿಗೆ ಸಂಪರ್ಕಿಸಿ.
99646 75441, 83103 56553

**ಬೇಕಾಗಿದ್ದಾರೆ**
ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ಕಛೇರಿಗೆ ಮಹಿಳೆಯರು ಬೇಕಾಗಿದ್ದಾರೆ. DTP Operator, ಆಫೀಸ್ ಅಸಿಸ್ಟೆಂಟ್. ಸಂಪರ್ಕಿಸಿ :
99027 71879

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್‌ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**HOUSE FOR RENT**
2 BHK
Near Athani College
89515 59965

**ಬೇಕಾಗಿದೆ**
30x40 ಸೈಟ್ ಅಥವಾ 4 ಗುಂಟೆ ಜಾಗ ಬೇಕಾಗಿದೆ.
ಬಾತಿ ಸುತ್ತ ಮುತ್ತ
PH : 81235 29544

**Happy Sankranti**
The only place to learn spoken English at
**Veta Experts in spoken English**
98450 40493
99028 60360

**ಸೈಟ್ ಮಾರಾಟಕ್ಕಿದೆ**
ಉತ್ತರಾಭಿಮುಖ 29.5 x70=2065 feet ಎಸ್.ಎಸ್. ಲೇಔಟ್, ಬಿ ಬ್ಲಾಕ್, ಇಂಡೋರ್ ಸ್ಟೇಡಿಯಂ ಹಿಂಭಾಗ
74119 19668

**ಹೊಸ 2 BHK ಮನೆ ಬಾಡಿಗೆಗಿದೆ**
2 BHK 1ನೇ ಫ್ಲೋರ್, ಹನಗವಾಡಿ ಬಡಾವಣೆ, ಹೊಸ ಕುಂದವಾಡ ಸರ್ವೀಸ್ ರಸ್ತೆ, ಸ್ವಾದ ಕೆಫೆ ಹಿಂಭಾಗ, ದಾವಣಗೆರೆ.
99011 20921

**HOUSE FOR SALE OR RENT**
40x60,3 BHK, # 3101/2, 9th main, 2nd cross, MCC 'B' Block, Davangere.
94810 - 32484
88254 - 81278

**ವಾಟರ್ ಲೀಕೇಜ್** (ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಮನೆ ಬಾಡಿಗೆಗೆ ಇದೆ**
2BHK & Big Hall with First floor both rooms, #1697/73, 5ನೇ ಮೇನ್, 16ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ.
99720 24250, 95034 49171

**FOR LEASE / RENT**
20000 Sqft of open land 5000 Sqft of Godown with power, water, safety walls available for Industry / Commercial purpose.
97403 10044

**ಹುಡುಗರು ಬೇಕಾಗಿದ್ದಾರೆ**
ಶ್ರೀ ಮಂಜುನಾಥಸ್ವಾಮಿ ಆಟೋಮೊಬೈಲ್ಸ್
ಕೆಲಸ ಮಾಡಲು ಹುಡುಗರು & ಡ್ರೈವರ್‌ಗಳು ಬೇಕಾಗಿದ್ದಾರೆ. ದಾವಣಗೆರೆ.
98800 56262

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ನೆಲ ಮಹಡಿ ಮನೆ ಬಾಡಿಗೆಗೆ**
SS ಆಸ್ಪತ್ರೆ ರಸ್ತೆಯಲ್ಲಿರುವ ಜಯನಗರ B ಬ್ಲಾಕ್‌ನಲ್ಲಿ ರೆಡ್ಡಿ ಬಿಲ್ಡಿಂಗ್ ಪಕ್ಕ ಬೋರ್ ವೆಲ್ ನೀರಿನ ಸೌಕರ್ಯ ಇರುವ ನೆಲ ಮಹಡಿ ಡಬ್ಬಲ್ ಬೆಡ್ ರೂಮಿನ ನೆಲ ಮಹಡಿ ಮನೆ ಬಾಡಿಗೆಗೆ ಇದೆ.
9902292018, 7899100101
94815 84360

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಹರ್ಷ ಹಾರ್ಡ್‌ವೇರ್ & ಪೇಂಟ್ಸ್
ಅಶೋಕ ಟಾಕೀಸ್ ಎದುರು, ದಾವಣಗೆರೆ.

**ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ನೂತನವಾಗಿ ಪ್ರಾರಂಭವಾಗಲಿರುವ ಸ್ಕಿನ್ ಕ್ಲಿನಿಕ್‌ನಲ್ಲಿ ಕೆಲಸ ಮಾಡಲು ನೌಕರರು ಬೇಕಾಗಿದ್ದಾರೆ.
Receptionist - 1
Therapist - 1
House keeping - 1
ಇಂಟರ್‌ವ್ಯೂ ಗಾಗಿ ಕಾಲ್ ಮಾಡಿ
ಡಾ. ಶ್ರೇಣಿಕ್ : 8809159071

**ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ**
ನುರಿತ ಹಾಗೂ ಅನುಭವವಿರುವ ಸೇಲ್ಸ್ ಗರ್ಲ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
G.J ಕಾಸ್ಮೆಟಿಕ್ಸ್ ಪ್ಯಾಲೇಸ್
(ಗೌಡ್ರ ಜಯದೇವಪ್ಪ) ಮಾಮಾಸ್ ಜಾಯಿಂಟ್ ರೋಡ್ ದಾವಣಗೆರೆ
ಫೋ. 9901969595

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ಪ್ರವಾಸ ಉದ್ಯಮದಲ್ಲಿ ಅನುಭವವಿರುವವರು ಕಾರ್ಯನಿರ್ವಾಹಕರ (Executive) ಹುದ್ದೆಗಳು ಖಾಲಿ ಇದೆ. ಆಸಕ್ತರು ಸಂಪರ್ಕಿಸಿ :
96069 20410
ಸುಶೀಲ್ ಹಾಲಿಡೇಸ್ & ಫಾರೆಕ್ಸ್ ಲಿ. ದಾವಣಗೆರೆ

**ಗೋಡೌನ್ ಬಾಡಿಗೆಗೆ**
20 HP ಕರೆಂಟ್, 4,000 ಅಡಿ + ಸ್ಟೋರೇಜ್ 2,500 ಅಡಿ ಕರೂರು ಇಂಡಸ್ಟ್ರಿಯಲ್ ಏರಿಯಾ KIADB ಗೋಡೌನ್ ಬಾಡಿಗೆಗೆ ಮತ್ತು ಹಳೆಯ ಡೈನಿಂಗ್ ಚೇರ್‌ಗಳು ಸೇಲ್‌ಗೆ ಇವೆ.
98459 77475
92421 45611

**ಬೇಕಾಗಿದ್ದಾರೆ**
1) ಆರ್ಡರ್ ಬುಕ್ಕಿಂಗ್ - ಪಿಯುಸಿ
2) ಬಿ.ಕಾಂ ಅಕೌಂಟ್ಸ್ / ಬಿಲ್ಲಿಂಗ್ ಜೊತೆಗೆ ಕಂಪ್ಯೂಟರ್ ಜ್ಞಾನ ( ವಿವಾಹಿತ ಮಹಿಳೆಯರಿಗೆ ಆದ್ಯತೆ) ಸ್ವವಿವರದೊಂದಿಗೆ ಸಂಪರ್ಕಿಸಿ.
ಎ.ಕೆ. ಟ್ರೇಡರ್ಸ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.

**ತಕ್ಷಣ ಬೇಕಾಗಿದ್ದಾರೆ**
ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್ ನಲ್ಲಿ ತರಬೇತಿಗೆ ಹಾಗೂ ಕೆಲಸಕ್ಕೆ ಬೇಕಾಗಿದ್ದಾರೆ, SSLC ಪಾಸ್ ಅಥವಾ ಫೇಲ್, ITI, Diploma ಆದ ಸ್ವಂತ ದ್ವಿಚಕ್ರ ವಾಹನ ಹೊಂದಿರತಕ್ಕದ್ದು,
Ph. 9986394387, 08192-230103
3 ಸ್ಟಾರ್ ಎಲೆಕ್ಟ್ರಾನಿಕ್ಸ್
ಲಾಯರ್ ರೋಡ್, HP ಗ್ಯಾಸ್ ಏಜೆನ್ಸಿ ಎದುರು ಕೆ.ಬಿ. ಬಡಾವಣೆ ದಾವಣಗೆರೆ-577002.

**CARS FOR SALE**
Renault Duster Rxl
Alto K10 Vxi
KIA Sonet Diesel
New Hyundai I20
Contact : Daivik Iynahalli
99456 43223

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್, ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್, ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್, ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀಸಾಯಿ ಏಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ಅಡಿಕೆ ತೋಟ ಮಾರಾಟಕ್ಕಿದೆ**
1) 6½ ಎಕರೆ, 5½ ವರ್ಷದ ಗಿಡ.
2) 4½ ಎಕರೆ, 4 ವರ್ಷದ ಗಿಡ.
3) 8 ಎಕರೆ, 9 ವರ್ಷದ ಗಿಡ.
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
ಏಜೆಂಟರು
8123115137

**ಬೇಕಾಗಿದ್ದಾರೆ**
ಇಂಗ್ಲೀಷ್‌ನಲ್ಲಿ ಮಾತನಾಡಲು ಬರುವಂತಹ ಮತ್ತು ಬೇಸಿಕ್ ಕಂಪ್ಯೂಟರ್ ತಿಳಿದಿರುವಂತಹ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಸಂಪರ್ಕಿಸಿ :
99006 66122

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಅನುಭವವಿರುವ ಸಪ್ಲೈಯರ್ ಮತ್ತು ಕ್ಲೀನರ್ ಬೇಕಾಗಿದ್ದಾರೆ. ಜಯನಗರ 'ಬಿ' ಬ್ಲಾಕ್, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ದಾವಣಗೆರೆ. ಸಂಪರ್ಕಿಸಿ :
99861 62462, 97420 97140

**ರೊಟ್ಟಿ ಮಾಡುವ ಯಂತ್ರ ಮಾರಾಟಕ್ಕಿದೆ.**
91483 57225

**HOUSE FOR LEASE**
Room for rent
2 BHK House 1st floor, 2 Rooms 2nd Floor.
Add : Near DC office, PB Road, Behind Global Public School, Davanagere.
91138 07848

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

## ಉಪ ಕಾರಾಗೃಹದಲ್ಲಿ ಸಂಗೀತ ಕಾರ್ಯಕ್ರಮ



ಹರಪನಹಳ್ಳಿ, ಜ.13- ತಾಲ್ಲೂಕು ಸರ್ಕಾರಿ ನಿವೃತ್ತ ನೌಕರರ ಸಂಘದಿಂದ ಭಾನುವಾರ ಇಲ್ಲಿನ ಉಪ ಕಾರಾಗೃಹದಲ್ಲಿ 'ವಚನ ಗಾಯನ, ಜಾನಪದ ಸಂಗೀತ' ಕಾರ್ಯಕ್ರಮ ನಡೆಯಿತು.

'ನಡೆಯುವವನು ಎಡವಲೇ ಬೇಕು, ನೀವು ಎಡವಿದ್ದೀರಿ. ನಿಮ್ಮ ತಪ್ಪುಗಳನ್ನು ಸರಿಪಡಿಸಿಕೊಂಡು ಸನ್ನಡತೆ ಹೊಂದಿ' ಎಂದು ನಿವೃತ್ತ ನೌಕರರ ಸಂಘದ ಅಧ್ಯಕ್ಷ ಶೇಖರಗೌಡ ಪಾಟೀಲ್ ಕಾರಾಗೃಹದಲ್ಲಿನ ಬಂಧಿಗಳಿಗೆ ಹೇಳಿದರು. ಸಾಸ್ವಿಹಳ್ಳಿ ಬಿ. ಶಂಕ್ರಪ್ಪ ಹಾಗೂ ತಂಡ ಮತ್ತು ಸಂಘದ ಸದಸ್ಯರಾದ ಎಂ. ಸಲಾಮ್ ಸಾಬ್, ಕೆ. ಈಶ್ವರಪ್ಪ ಅವರ ನೇತೃತ್ವದಲ್ಲಿ ಸಂಗೀತ ಕಾರ್ಯಕ್ರಮ ನಡೆಯಿತು.

ಈ ವೇಳೆ ಉಪ ಕಾರಾಗೃಹದ ಅಧೀಕ್ಷಕ ಕೆ.ಜಿ. ಭಂಡಾರಿ, ಹೆಡ್ ವಾರ್ಡರ್ ಎಸ್.ಜೆ.ಮುರುಗೇಶ, ನರಸಿಂಗ ಕಲಾಲ್, ಬಿ. ಶೇಖರಪ್ಪ, ಫಕ್ಕೀರಪ್ಪ, ಕೆ. ಕೊಟ್ರಪ್ಪ, ಗಾಯಿತ್ರಮ್ಮ, ಹುಣ್ಸಿಹಳ್ಳಿ ಹನುಮಂತಪ್ಪ, ಹಾಲಪ್ಪ, ಸಾಸ್ವಿಹಳ್ಳಿ ಗ್ರಾಮದ ಸಂಗೀತಗಾರರು, ಕಾರಾಗೃಹದ ಸಿಬ್ಬಂದಿ ಇದ್ದರು.

## ಹರಿಹರದಲ್ಲಿ ಭೂ ಸುರಕ್ಷಾ ಕಾರ್ಯಾಲಯ ಕಾರ್ಯಾರಂಭ



ಹರಿಹರ, ಜ.13- ನಗರದ ತಹಶೀಲ್ದಾರ್ ಕಚೇರಿಯಲ್ಲಿ ಸರ್ವೇ ಮತ್ತು ನೋಂದಣಿ ಇಲಾಖೆಯ ಎಲ್ಲಾ ದಾಖಲೆಗಳ ಡಿಜಿಟಲೀಕರಣ ಭೂ ಸುರಕ್ಷಾ ಯೋಜನೆಯ ಕಾರ್ಯಾಲಯ ವನ್ನು ಶಾಸಕ ಬಿ.ಪಿ. ಹರೀಶ್ ಉದ್ಘಾಟನೆ ಮಾಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಗುರುಬಸವರಾಜ್, ತಾಲ್ಲೂಕು ಆಡಳಿತದ ಸಿಬ್ಬಂದಿಗಳು ಹಾಜರಿದ್ದರು.

# ಮಾಗನೂರು ಬಸಪ್ಪ ಶಾಲೆಯಲ್ಲಿ ಸಂಕ್ರಾಂತಿ ಸಂಭ್ರಮ





ದಾವಣಗೆರೆ, ಜ. 13- ಶಾಲೆಯ ಅಂಗಳ ಪ್ರವೇಶಿಸುತ್ತಿದ್ದಂತೆ ಎದುರಾದ ಚಪ್ಪರದ ಸ್ವಾಗತ. ಮುಂದೆ ಸಾಗಿದರೆ ಪೂಜೆಗೆ ಸಿದ್ಧಪಡಿಸಿದ ವಿವಿಧ ಧಾನ್ಯಗಳ ರಂಗೋಲಿ, ಪಕ್ಕದಲ್ಲೇ ಕುಂಭ ಸಹಿತ ಧಾನ್ಯಗಳ ರಾಶಿ. ರಾಶಿಯ ಮೇಲೆ ಹೂ, ಬಾಳೆ, ಕಬ್ಬು, ಹೊಂಬಾಳೆ, ಎಲೆ ಅಡಿಕೆ, ಬೆಲ್ಲದ ಸಿಂಗಾರ.

ಅಂಗಳದ ತುಂಬಾ ಸೀರೆ, ರವಿಕೆ, ಪಂಚೆ, ಜುಬ್ಬಾ, ಟವೆಲ್ ಹಾಕಿಕೊಂಡು ಸಂಭ್ರಮದಿಂದ ಓಡಾಡುತ್ತಿದ್ದ ಚಿಣ್ಣರು...

ಇಲ್ಲಿನ ತರಳಬಾಳು ಬಡಾವಣೆಯಲ್ಲಿನ ಮಾಗನೂರು ಬಸಪ್ಪ ಶಾಲೆಯ ಅಂಗಳದಲ್ಲಿ ಸೋಮವಾರ ಕಂಡುಬಂದ ದೃಶ್ಯವಿದು.

ಮಕ್ಕಳಲ್ಲಿ ಭಾರತೀಯ ಸಂಸ್ಕೃತಿ, ಪರಂಪರೆ, ಆಚರಣೆಗಳ ಅರಿವು ಮೂಡಿಸುವ ಉದ್ದೇಶದಿಂದ ಶಾಲೆಯಲ್ಲಿ ಸಂಕ್ರಾಂತಿ ಹಬ್ಬ ಆಚರಿಸಲಾಯಿತು. ಸುಗ್ಗಿಯ ಹಬ್ಬವಾಗಿರುವುದರಿಂದ ವಿಶೇಷವಾಗಿ ಬೆಳೆಯ ರಾಶಿಯ ಪೂಜೆ ಮಾಡಲಾಯಿತು.

ಆವರಣದಲ್ಲಿ ಪೋಷಕರು, ಶಿಕ್ಷಕರ ನೆರವಿನಿಂದ ಮಕ್ಕಳೇ ತಯಾರಿಸಿದ ಬಾವಿ, ಚಕ್ಕಡಿ ಬಂಡಿ ಚಂದ ಕಂಡವು. ಚಿಕ್ಕ ಗುಡಿಸಲಿನ ಮಾದರಿಯಲ್ಲಿ ಕಟ್ಟಿಗೆಯ ಒಲೆ, ಶಾವಿಗೆ ಮಣೆ, ಮಜ್ಜಿಗೆಯ ಕಡಗೋಲು, ಹಳೆಯ ಪಿಟಾರಿ ಸೇರಿದಂತೆ ಹಳ್ಳಿ ಮನೆಯಲ್ಲಿರುತ್ತಿದ್ದ ಗೃಹ ಬಳಕೆ ವಸ್ತುಗಳು ಗಮನ ಸೆಳೆದವು.

ಶಾಲೆಯ ಅಂಗಳದಲ್ಲಿ ಬಣ್ಣದ ರಂಗೋಲಿ ಬಿಡಿಸಿ ಅಲಂಕರಿಸಲಾಗಿತ್ತು. ಶಾಲೆಯ ಮಕ್ಕಳು ತಾವೇ ತಯಾರಿಸಿದ ಗಾಳಿಪಟ ಹಾರಿಸಿ ಸಂಭ್ರಮಿಸಿದರು. ಪೂಜೆಯ ನಂತರ ಎಳ್ಳು, ಬೆಲ್ಲ, ಕಬ್ಬು ವಿತರಿಸಿ ಶುಭಾಶಯ ಹಂಚಿಕೊಂಡರು. ಶಿಕ್ಷಕರು, ಸಿಬ್ಬಂದಿಗಳು, ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಅತಿಥಿಗಳಿಗೆ ಖಡಕ್ ರೊಟ್ಟಿ, ಚಟ್ನಿಪುಡಿ, ಪಲ್ಯೆ, ಗೋದಿ ಪಾಯಸ, ಬುತ್ತಿ ಉಂಡೆ, ಮಿರ್ಚಿ, ಮಜ್ಜಿಗೆ ಸೇರಿದಂತೆ ಸವಿಯಾದ ಊಟವಿತ್ತು. ಆಧುನಿಕತೆಯ ಭರಾಟೆಯಲ್ಲಿ ಗ್ರಾಮೀಣ ಭಾಗದಲ್ಲೂ ಸಂಸ್ಕೃತಿ, ಆಚರಣೆಗಳು ಕಣ್ಮರೆಯಾಗುತ್ತಿವೆ. ನಮ್ಮ ಹಬ್ಬದ ಆಚರಣೆಗಳನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ಅಗತ್ಯವಿದೆ. ಮಕ್ಕಳು ವರ್ಷದ ಮೊದಲ ಹಬ್ಬ ಹಾಗೂ ಸುಗ್ಗಿಯ ಹಬ್ಬವಾಗಿರುವ ಸಂಕ್ರಾಂತಿಯನ್ನು ಸಡಗರದಿಂದ ಆಚರಿಸಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ನಿಕಟಪೂರ್ವ ಜಿಲ್ಲಾಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಸಂಸ್ಥೆಯ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರ ಗೌಡ್ರು ಮಾತನಾಡಿ, ಸಂಕ್ರಾಂತಿ ಎಲ್ಲರಲ್ಲಿಯೂ ಒಳ್ಳೆಯ ನುಡಿಗಳನ್ನಾಡುವ ವಾತಾವರಣ ಕಲ್ಪಿಸುತ್ತದೆ ಎಂದರು.

ಆಡಳಿತಾಧಿಕಾರಿ ಎಸ್.ಆರ್. ಶಿರಗುಂಬಿ, ಮುಖ್ಯೋಪಾಧ್ಯಾಯಿನಿ ಕುಸುಮ, ಪಿಯು ಕಾಲೇಜು ಪ್ರಾಚಾರ್ಯ ಡಾ.ಪ್ರಸಾದ್ ಬಂಗೇರ, ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಕೆ.ಟಿ. ನಾಗರಾಜನಾಯ್ಕ ಸೇರಿದಂತೆ ಇತರರು ಸಂಕ್ರಾಂತಿ ಸಂಭ್ರಮದಲ್ಲಿ ಭಾಗಿಯಾಗಿದ್ದರು.

ವಿದ್ಯಾರ್ಥಿಗಳಿಗೆ ವ್ಯಾವಹಾರಿಕ ಜ್ಞಾನ ನೀಡುವುದಕ್ಕಾಗಿ ಸಂತೆ ಏರ್ಪಡಿಸಲಾಗಿತ್ತು. ಸಾಂಪ್ರದಾಯಿಕ ಗ್ರಾಮೀಣ ಖಾದ್ಯಗಳನ್ನು ಪ್ರದರ್ಶಿಸಲಾಯಿತು. ಮಕ್ಕಳಿಗೆ ಸಾಂಪ್ರದಾಯಿಕ ಆಟಗಳಾದ ಕಣ್ಣಾಮುಚ್ಚಾಲೆ, ಲಗೋರಿ, ರತ್ತೋ ರತ್ತೋ ಮುಂತ್ತಾದ ಆಟಗಳನ್ನು ಆಡಿಸಲಾಯಿತು.

## ಎಕ್ಕೆಗೊಂದಿ : ಇಂದು ಆರೋಗ್ಯ ಶಿಬಿರ, ಸಿದ್ಧರಾಮೇಶ್ವರ ಉತ್ಸವ

ಮಲೇಬೆನ್ನೂರು ಸಮೀಪದ ಎಕ್ಕೆಗೊಂದಿ ಗ್ರಾಮದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಶ್ರೀ ಗುರು ಸಿದ್ಧರಾಮೇಶ್ವರರ ಜಯಂತ್ಯೋತ್ಸವದ ಅಂಗವಾಗಿ ಶ್ರೀ ನಂದಿ ಸೌಹಾರ್ದ ಸಹಕಾರಿ ಸಂಘ (ಮಲೇಬೆನ್ನೂರು) ಮತ್ತು ಎಸ್.ಎಸ್.ಕೇರ್ ಟ್ರಸ್ಟ್ (ದಾವಣಗೆರೆ) ಇವರುಗಳ ಆಶ್ರಯದಲ್ಲಿ ಇಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 2 ಗಂಟೆವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಸಂಜೆ 6 ಗಂಟೆಯಿಂದ ಗ್ರಾಮದಲ್ಲಿ ಶ್ರೀ ಗುರುಸಿದ್ಧರಾಮೇಶ್ವರರ ಅಡ್ಡ ಪಲ್ಲಕ್ಕಿ ಉತ್ಸವ ನಡೆಯಲಿದ್ದು, ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ, ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕರಾದ ಹೆಚ್.ಎಸ್.ಶಿವಶಂಕರ್, ಎಸ್. ರಾಮಪ್ಪ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಚಂದ್ರಶೇಖರ್ ಪೂಜಾರ್, ನಂದಿಗಾವಿ ಶ್ರೀನಿವಾಸ್ ಭಾಗವಹಿಸಲಿದ್ದಾರೆ.

## ಸಂಶೋಧನೆ ಹೆಸರಲ್ಲಿ ಮಗುವಿಗೆ ಹಾನಿ: ಬೇಸತ್ತ ತಂದೆ ದಯಾಮರಣಕ್ಕೆ ಅರ್ಜಿ

ದಾವಣಗೆರೆ, ಜ. 13- ಪತ್ನಿ 8 ತಿಂಗಳ ಗರ್ಭಿಣಿಯಾಗಿದ್ದಾಗ ಆಸ್ಪತ್ರೆಗೆ ತೆರಳಿದ್ದಾಗ ಯಾವುದೇ ಮಾಹಿತಿ ನೀಡದೆ ಸಂಶೋಧನೆ ನಡೆಸುವ ನೆಪದಲ್ಲಿ ಮಗಳಿಗೆ ತೊಂದರೆ ಮಾಡಿದ್ದಾರೆ. ಇದರಿಂದಾಗಿ 1 ವರ್ಷದ ನನ್ನ ಹೆಣ್ಣು ಮಗು ತೀವ್ರ ಅನಾರೋಗ್ಯಕ್ಕೆ ತುತ್ತಾಗಿದೆ ಎಂದು ಹೊಳಲ್ಕೆರೆಯ ಎ. ಗೋಪಾಲ ಆರೋಪಿಸಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ಮಹಿಳಾ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆಯಲ್ಲಿ ಈ ಘಟನೆ ನಡೆದಿದೆ. ಆರೋಗ್ಯ ಅಧಿಕಾರಿಗಳು, ಪೊಲೀಸರು, ಲೋಕಾಯುಕ್ತ, ಜಿಲ್ಲಾಧಿಕಾರಿ, ಮಾನವ ಹಕ್ಕುಗಳ ಆಯೋಗ ಹೀಗೆ ಹಲವೆಡೆ ಈ ಬಗ್ಗೆ ದೂರು ನೀಡಿದರೂ ನನಗೆ ನ್ಯಾಯ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಬೇಸರಗೊಂಡು ದಯಾಮರಣಕ್ಕೆ ಅರ್ಜಿ ಸಲ್ಲಿಸಿದ್ದೇನೆ. ನನ್ನ ಮಗಳ ಅನಾರೋಗ್ಯಕ್ಕೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳಬೇಕು. ಇಲ್ಲವೇ ದಯಾಮರಣಕ್ಕೆ ಅವಕಾಶ ಕೊಡಬೇಕು ಎಂದು ಒತ್ತಾಯಿಸಿದ್ದಾರೆ

## ಕುಂಭಮೇಳದಲ್ಲಿ 'ನಂದಿನಿ ಚಾಯ್'

**(1ನೇ ಪುಟದಿಂದ)** ಮಾಡಲಾಗುವುದು ಎಂದು ಅದು ಹೇಳಿದೆ.

ಈ ಒಪ್ಪಂದದ ಭಾಗವಾಗಿ ಕುಂಭಮೇಳದಾದ್ಯಂತ ಚಾಯ್ ಪಾಯಿಂಟ್ 10 ಮಳಿಗೆಗಳನ್ನು ಸ್ಥಾಪಿಸಲಿದ್ದು, ಸುಮಾರು 1 ಕೋಟಿ ಕಪ್ ಚಹಾ ವಿತರಿಸುವ ಗುರಿ ಹಾಕಿಕೊಳ್ಳಲಾಗಿದೆ. ಆ ಮೂಲಕ ಒಂದೇ ಕಾರ್ಯಕ್ರಮದಲ್ಲಿ ಅತಿ ಹೆಚ್ಚು ಚಹಾ ಮಾರಿದ ಗಿನ್ನಿಸ್ ವಿಶ್ವ ದಾಖಲೆಯನ್ನೂ ಮಾಡಲಾಗುವುದು ಎಂದು ಕೆ.ಎಂ.ಎಫ್ ಪ್ರಕಟಣೆಯಲ್ಲಿ ಹೇಳಿದೆ.

ಮಹಾ ಕುಂಭಮೇಳದಲ್ಲಿ ಸವಿಯುವ ಪ್ರತೀ ಕಪ್ ಚಹಾ ಕೂಡ ನಂದಿನಿಯ ಶ್ರೀಮಂತ ಹಾಗೂ ಉತ್ತಮ ಗುಣಮಟ್ಟದ ಹಾಲಿನಿಂದ ತಯಾರಿಸಲಾಗುತ್ತದೆ. ಚಹಾ ಪ್ರಿಯರಿಗೆ ಸಂತೋಷದ ಅನುಭವ ನೀಡಲಿದೆ ಎಂದು ಪ್ರಕಟಣೆ ಹೇಳಿದೆ.

# ಮಹಿಳಾ ಶಿಕ್ಷಣ ಮತ್ತು ಸಬಲೀಕರಣದಲ್ಲಿ ರೋಟರಿ ಪಾತ್ರ ಶ್ಲಾಘನೀಯ : ಎಸ್ಪಿ




ದಾವಣಗೆರೆ, ಜ.13- ಹಲವು ಸಾಮಾಜಿಕ ಕಾರ್ಯಗಳಲ್ಲಿ ಗಣನೀಯವಾಗಿ ತೊಡಗಿಸಿಕೊಂಡಿರುವ ರೋಟರಿ ಸಂಸ್ಥೆ ಮಹಿಳಾ ಶಿಕ್ಷಣ ಮತ್ತು ಸಬಲೀಕರಣದಲ್ಲಿ ಶ್ಲಾಘನೀಯ ಪಾತ್ರ ವಹಿಸುತ್ತಿದೆ ಎಂದು ಜಿಲ್ಲಾ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮೆಚ್ಚುಗೆ ಸೂಚಿಸಿದರು.

ನಗರದ ರೋಟರಿ ಬಾಲ ಭವನದಲ್ಲಿ ನಿನ್ನೆ ನಡೆದ ಗ್ರಾಮೀಣ ಸರ್ಕಾರಿ ಶಾಲಾ ವಿದ್ಯಾರ್ಥಿನಿಯರಿಗೆ ಸೈಕಲ್ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ನೆರೆದಿದ್ದ ವಿದ್ಯಾರ್ಥಿನಿಯರನ್ನುದ್ದೇಶಿಸಿ ಮಾತನಾಡಿದ ಎಸ್ಪಿ, 'ಹೆಣ್ಣೊಂದು ಕಲಿತರೆ... ಶಾಲೆಯೊಂದು ತೆರೆದಂತೆ' ಆದ್ದರಿಂದ ಹೆಣ್ಣು ಮಕ್ಕಳು ಒಳ್ಳೆಯ ಶಿಕ್ಷಣವನ್ನು ತಪ್ಪದೇ ಪಡೆಯಬೇಕು. ಶಿಕ್ಷಿತ ಹೆಣ್ಣು ಮಕ್ಕಳು ಸಮಾಜದಲ್ಲಿ ಬಹುದೊಡ್ಡ ಸಾಧನೆ ಮಾಡಬಲ್ಲರು ಎಂದು ವಿದ್ಯಾರ್ಥಿನಿಯರಿಗೆ ಸ್ಫೂರ್ತಿ ತುಂಬಿದರು.

ರೋಟರಿ ಸಂಸ್ಥೆಯವರು ಕೊಡ ಮಾಡುತ್ತಿರುವ ಬೈಸಿಕಲ್ಲನ್ನು ಗ್ರಾಮೀಣ ಬಡ ವಿದ್ಯಾರ್ಥಿನಿಯರು ಸದುಪಯೋಗ ಪಡಿಸಿಕೊಳ್ಳಬೇಕು. ಅವುಗಳನ್ನು ಬಳಸುವಾಗ ರಸ್ತೆ ಸುರಕ್ಷತಾ ಕ್ರಮಗಳನ್ನು ಪಾಲಿಸಬೇಕು ಎಂದು ಕರೆ ನೀಡಿದರು.

ಇನ್ನೋರ್ವ ಅತಿಥಿಯಾಗಿದ್ದ ದೂರದರ್ಶನದ ಮಾಧ್ಯಮ ಪ್ರತಿನಿಧಿ ಎ.ಎಲ್. ತಾರಾನಾಥ್ ಮಾತನಾಡಿ, ರೋಟರಿ ಸಂಸ್ಥೆ ಮಾಡುತ್ತಿರುವ ಕಾರ್ಯಗಳಿಗೆ ಮೆಚ್ಚುಗೆ ಸೂಚಿಸಿ, ಈ ರೀತಿಯ ಸಹಾಯಗಳು ಇನ್ನೂ ಹೆಚ್ಚು ಬಡ ವಿದ್ಯಾರ್ಥಿನಿಯರನ್ನು ತಲುಪುವಂತಾಗಬೇಕು ಎಂದು ಹೇಳಿದರು.

2025 - 26ನೇ ಸಾಲಿನ ರೋಟರಿ ಜಿಲ್ಲಾ ಗವರ್ನರ್ ಎಂ.ಕೆ. ರವೀಂದ್ರ ಮಾತನಾಡಿ, ರೋಟರಿ ಕ್ಲಬ್‌ನ ಧ್ಯೇಯಗಳು, ಉದ್ದೇಶಗಳು ಮತ್ತು ಸಾಮಾಜಿಕ ಕಾರ್ಯಗಳ ಕುರಿತು ಸಂಕ್ಷಿಪ್ತವಾಗಿ ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರೋಟರಿ ಕ್ಲಬ್ ಸುನೀತಾ ಮೃತುಂಜಯ ಮಾತನಾಡಿ, ಈ ಬಾರಿ 70 ವಿದ್ಯಾರ್ಥಿನಿಯರಿಗೆ ಬೈಸಿಕಲ್‌ಗಳನ್ನು ವಿತರಣೆ ಮಾಡ ಲಾಗುವುದು. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸಹಾಯ ಮಾಡಲು ಪ್ರಯತ್ನಿಸುತ್ತೇವೆ ಎಂದು ಹೇಳಿ, ತಮ್ಮ ರೋಟರಿ ಸಂಸ್ಥೆ ಯುವತಿಯರಿಗೆ, ಮಹಿಳೆಯರಿಗೆ ಉಪಯುಕ್ತವಾಗುವ ಇನ್ನೂ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ ಎಂದು ಹೇಳಿದರು.

ಕಾರ್ಯದರ್ಶಿ ಆರ್.ಟಿ. ಮೃತುಂಜಯ ಮಾತನಾಡಿ, ಸೈಕಲ್ ವಿತರಣೆಗಾಗಿ ತಾವು ಹಮ್ಮಿಕೊಂಡಿದ್ದ ಯೋಜ ನೆಯ ಕಾರ್ಯವೈಖರಿ ಮತ್ತು ಫಲಾನುಭವಿಗಳ ಆಯ್ಕೆ ಗಾಗಿ ತೆಗೆದುಕೊಂಡ ಮಾನದಂಡಗಳನ್ನು ವಿವರಿಸಿದರು.

ರೋಟರಿ ಜಿಲ್ಲಾ ಗವರ್ನರ್ ಮಲ್ಲೇಶಪ್ಪ ಬಿಲ್ಲಳ್ಳಿ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ರೋಟರಿ ಮಾಜಿ ಅಧ್ಯಕ್ಷ ಆರ್. ಎಸ್. ವಿಜಯಾನಂದ್ ಕಾರ್ಯಕ್ರಮ ನಿರೂಪಣೆ ಮಾಡಿದರು.

ಇದೇ ಸಂದರ್ಭದಲ್ಲಿ ಮಾಧ್ಯಮ ಪ್ರಶಸ್ತಿಗೆ ಭಾಜನರಾದ ಎ.ಎಲ್. ತಾರಾನಾಥ್ ಅವರನ್ನು ಗೌರವಿಸಲಾಯಿತು.

## ಮೌಲ್ಯ, ಸಂಸ್ಕೃತಿ ಪಾಲಿಸುವ ಭಾರತೀಯರಿಗೆ ವಿಶೇಷ ದಿನ



ನವದೆಹಲಿ, ಜ.13- ಭಾರತೀಯ ಮೌಲ್ಯಗಳು ಮತ್ತು ಸಂಸ್ಕೃತಿಯನ್ನು ಪಾಲಿಸುವವರಿಗೆ ಇದು ಬಹಳ ವಿಶೇಷವಾದ ದಿನ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾರತೀಯ ಮೌಲ್ಯಗಳು ಮತ್ತು ಸಂಸ್ಕೃತಿಯನ್ನು ಪಾಲಿಸುವ ಕೋಟ್ಯಂತರ ಜನರಿಗೆ ಇದು ಬಹಳ ವಿಶೇಷವಾದ ದಿನ, ಮಹಾಕುಂಭ ಮೇಳ 2025 ಪ್ರಯಾಗ್‌ರಾಜ್‌ನಲ್ಲಿ ಪ್ರಾರಂಭವಾಗುತ್ತಿದ್ದು, ನಂಬಿಕೆ, ಭಕ್ತಿ ಮತ್ತು ಸಂಸ್ಕೃತಿಯ ಪವಿತ್ರ ಸಂಗಮದಲ್ಲಿ ಅಸಂಖ್ಯಾತ ಜನರನ್ನು ಒಟ್ಟುಗೂಡಿಸುತ್ತದೆ.

ಮಹಾ ಕುಂಭವು ಭಾರತದ ಕಾಲಾತೀತ ಅಧ್ಯಾತ್ಮಿಕ ಪರಂಪರೆಯನ್ನು ಸಾಕಾರಗೊಳಿಸುತ್ತದೆ, ನಂಬಿಕೆ ಮತ್ತು ಸಾಮರಸ್ಯವನ್ನು ಎತ್ತಿ ಹಿಡಿಯುತ್ತದೆ ಎಂದು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪ್ರಧಾನಿ ಪೋಸ್ಟ್ ಮಾಡಿದ್ದಾರೆ.

ಮತ್ತೊಂದು ಪೋಸ್ಟ್ ನಲ್ಲಿ ಪವಿತ್ರ ಸ್ನಾನ ಮಾಡಿ ಆಶೀರ್ವಾದ ಪಡೆಯಲು ಅಸಂಖ್ಯಾತ ಜನರು ಪ್ರಯಾಗ್‌ರಾಜ್‌ಗೆ ಬರುತ್ತಿರುವುದನ್ನು ನೋಡಿ ನನಗೆ ಸಂತೋಷವಾಗಿದೆ. ಎಲ್ಲಾ ಯಾತ್ರಿಕರು ಮತ್ತು ಪ್ರವಾಸಿಗರಿಗೆ ಶುಭ ಹಾರೈಸುತ್ತೇನೆಂದು ತಿಳಿಸಿದ್ದಾರೆ.

## ಪ್ರಸಾದ ಕೌಂಟರ್‌ನಲ್ಲಿ ಅಗ್ನಿ ಅವಘಡ

**(1ನೇ ಪುಟದಿಂದ)** ಸ್ಥಳಕ್ಕೆ ಧಾವಿಸಿ ಬೆಂಕಿ ಹರಡುವುದನ್ನು ನಿಯಂತ್ರಣಕ್ಕೆ ತಂದಿದ್ದಾರೆ. ಬೆಂಕಿ ಕಾಣಿಸಿಕೊಂಡ ಕಾರಣ ಪ್ರಸಾದ ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದ ಜನ ಓಡಿದ್ದು, ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು ಎಂದು ತಿಳಿದುಬಂದಿದೆ.

## ನಗರದಲ್ಲಿ ಇಂದು ಚಿಂತನಾ ಗೋಷ್ಠಿ

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಲ್ಲಿ ಇಂದು ಸಂಜೆ 7 ರಿಂದ 9ರವರೆಗೆ ಆನ್‌ಲೈನ್‌ನಲ್ಲಿ ಶರಣ ಚಿಂತನ ಗೋಷ್ಠಿ ಕಾರ್ಯಕ್ರಮ ನಡೆಯಲಿದೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ತಿಳಿಸಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ವಾನ್ ಎಂ.ಜಿ. ಸಿದ್ದರಾಮಯ್ಯ ವಹಿಸಲಿದ್ದು, ಶರಣ ಸಂಸ್ಕೃತಿ ಚಿಂತಕ ಜಿ.ಕೆ. ಕುಲಕರ್ಣಿ ವಚನಗಳಲ್ಲಿ ಸಂಸ್ಕೃತಿ ವಿಷಯದ ಕುರಿತು ಮಾತನಾಡುವರು.

## ಲಯನ್ಸ್ ಪ್ರಾಂತೀಯ ಅಧ್ಯಕ್ಷ ಸತೀಶ್ ಭೇಟಿ




ದಾವಣಗೆರೆ, ಜ.13- ನಗರದ ಲಯನ್ಸ್ ಕ್ಲಬ್‌ಗೆ ಲಯನ್ಸ್ ಪ್ರಾಂತೀಯ ಅಧ್ಯಕ್ಷ ವೈ.ಬಿ. ಸತೀಶ್ ಅವರು ಅಧೀಕೃತವಾಗಿ ಭೇಟಿ ನೀಡಿ ಸೇವಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ವೇಳೆ ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ ಉಳವಯ್ಯ, ಲಯನ್ಸ್ ಮಾಜಿ ರಾಜ್ಯಪಾಲ ಡಾ.ಬಿ.ಎಸ್ ನಾಗಪ್ರಕಾಶ್, ಕಾರ್ಯದರ್ಶಿ ಸಿ.ಅಜಯ್ ನಾರಾಯಣ್, ಖಜಾಂಚಿ ಎಸ್. ನಾಗರಾಜ್, ಸಹ ಕಾರ್ಯದರ್ಶಿ ಹೆಚ್.ಎಂ ನಾಗರಾಜ್ ಮತ್ತು ಪದಾಧಿಕಾರಿಗಳು ಇದ್ದರು.

**WANTED**

1) Applications are invited for the post of Audit Assistant.
2) No. of Vacancies - 2
3) Minimum Qualification : Any Graduations with Computer & Tally Knowledge
4) Minimum Experience : Minimum 2 Years Experience with any Auditor
5) Remuneration : Rs. 20,000 to 30,000 Depending upon Experience and Knowledge.

From : **Shankar & Co.,** Auditor & Tax Practitioner
AMARAVATHI HOUSING COLONY, DOGGALLI ROAD, HARIHAR - 577 601. Mobile : 98808 77101

## ವೃತ್ತಿ ರಂಗನಾಟಕ ರಚನಾ ಶಿಬಿರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜ.13- ಕರ್ನಾಟಕ ನಾಟಕ ಅಕಾಡೆಮಿ ಹಾಗೂ ವೃತ್ತಿ ರಂಗಭೂಮಿ ರಂಗಾಯಣದ ಸಹಯೋಗದಲ್ಲಿ 5 ದಿನಗಳ ಕಾಲ ನಡೆಯುವ ರಾಜ್ಯಮಟ್ಟದ 'ವೃತ್ತಿ ರಂಗ ನಾಟಕ ರಚನಾ ಶಿಬಿರ'ಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಸ್ವಪರಿಚಯದೊಂದಿಗೆ ಇದೇ ದಿನಾಂಕ 20ರೊಳಗೆ ವೃತ್ತಿ ರಂಗಭೂಮಿ ರಂಗಾಯಣಕ್ಕೆ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸಿ : 9341010712. **ಅರ್ಜಿ ಸಲ್ಲಿಸಬೇಕಾದ ವಿಳಾಸ :** ನಿರ್ದೇಶಕರು / ವಿಶೇಷಾಧಿಕಾರಿಗಳು, 'ವೃತ್ತಿ ರಂಗಭೂಮಿ ರಂಗಾಯಣ' ಕೊಠಡಿ ಸಂ.38, ಎ, ಮೊದಲ ಮಹಡಿ, ಜಿಲ್ಲಾಡಳಿತ ಭವನ, ಪಿ.ಬಿ. ರಸ್ತೆ ದಾವಣಗೆರೆ-6.

## ನಾಳೆಯಿಂದ ಎಸ್‌ಎಸ್‌ವೈ ತರಬೇತಿ ಶಿಬಿರ

ದಾವಣಗೆರೆ, ಜ. 13- ನಗರದ ರಾಂ ಅಂಡ್ ಕೋ ವೃತ್ತದಲ್ಲಿರುವ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 15ರಿಂದ ಸಿದ್ಧ ಸಮಾಧಿ ಯೋಗ (ಎಸ್‌ಎಸ್‌ವೈ) ತರಬೇತಿ ಶಿಬಿರ ನಡೆಯಲಿದೆ ಎಂದು ರೇಣುಕಾ ಮಾತಾಜಿ (99646 75441, 83103 56553) ತಿಳಿಸಿದ್ದಾರೆ.

## ಆಕಳ ಕೆಚ್ಚಲು ಕೊಯ್ದ ದುಷ್ಕೃತ್ಯ ಖಂಡಿಸಿ ಇಂದು ನಗರದಲ್ಲಿ ಬಿಜೆಪಿ ಪ್ರತಿಭಟನೆ

'ಹಸುಗಳ' ಕೆಚ್ಚಲನ್ನು ದುಷ್ಕರ್ಮಿಗಳು ಕೊಯ್ದು ಪೈಶಾಚಿಕ ಕೃತ್ಯವನ್ನು ಖಂಡಿಸಿ ಜಿಲ್ಲಾ ಬಿಜೆಪಿ ರೈತ ಮೋರ್ಚಾದಿಂದ ಗೋವುಗಳೊಂದಿಗೆ ಬೃಹತ್ ಪ್ರತಿಭಟನೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಡಾ. ಎಂ.ಸಿ. ಮೋದಿ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ಮತ್ತು ರೈತ ಮೋರ್ಚಾ ಮುಖಂಡ ಕೊಳೇನಹಳ್ಳಿ ಬಿ.ಎಂ. ಸತೀಶ್ ತಿಳಿಸಿದ್ದಾರೆ.

## ಜಿಲ್ಲಾ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪ್ರೀಮಿಯರ್ ಲೀಗ್ ಪಂದ್ಯಕ್ಕೆ ಹರಾಜು

ದಾವಣಗೆರೆ, ಜ. 13- ದೇವನಗರಿ ಕ್ರೀಡಾ ಸಮಿತಿ, ಎಸ್.ಎಸ್. ಮಲ್ಲಿಕಾರ್ಜುನ್, ಮಣಿ ಸರ್ಕಾರ್ ಸಂಯುಕ್ತಾಶ್ರಯದಲ್ಲಿ ಫೆಬ್ರವರಿ 14, 15 ಹಾಗೂ 16 ರಂದು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಎರಡನೇ ಬಾರಿ ಹೊನಲು ಬೆಳಕಿನ ಜಿಲ್ಲಾ ಮಟ್ಟದ ಕಬಡ್ಡಿ ಪ್ರೀಮಿಯರ್ ಲೀಗ್-2025 ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಶ್ರೀರಾಮ ಸೇನೆಯ ಉತ್ತರ ವಲಯದ ಅಧ್ಯಕ್ಷ ಮಧು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಪಂದ್ಯಾವಳಿಯಲ್ಲಿ 12 ಆಟಗಾರರಂತೆ ಒಟ್ಟು 8 ತಂಡಗಳಿಗೆ ಹರಾಜು ಪ್ರಕ್ರಿಯೆ ಇದೇ ದಿನಾಂಕ 19 ರಂದು ಬೆಳಿಗ್ಗೆ 10 ಗಂಟೆಗೆ ಬಾಪೂಜಿ ಸ್ಟೇಡಿಯಂ, ಒಳಾಂಗಣ ಕ್ರೀಡಾಂಗಣದಲ್ಲಿ ನದೆಯಲಿದೆ ಎಂದರು.

ತಂಡವನ್ನು ಖರೀದಿ ಮಾಡಲು ಆಸಕ್ತರು 7795698454, 9535828483 ಗೆ ಸಂಪರ್ಕಿಸಬಹುದು.

ಸುದ್ದಿಗೋಷ್ಠಿಯಲ್ಲಿ ಶ್ರೀರಾಮ ಸೇನೆಯ ಪದಾಧಿಕಾರಿಗಳಾದ ಪರಶುರಾಮ್, ಸುನೀಲ್ ಖಲಂದರ್, ಪ್ರದೀಪ, ಎಸ್.ಸುನೀಲ್ ಉಪಸ್ಥಿತರಿದ್ದರು.




## ಸಾರ್ವಜನಿಕ ಪ್ರಕಟಣಾ ನೋಟೀಸ್

ನಮ್ಮ ಕಕ್ಷಿದಾರರಾದ ಶ್ರೀ ಜಿ.ಸಿ. ರವಿಶಂಕರ್ ಬಿನ್ ಲೇಟ್ ಪಟೇಲ್ ಚನ್ನಬಸಪ್ಪ 63 ವರ್ಷ ನರಗನಹಳ್ಳಿ ಗ್ರಾಮ, ದಾವಣಗೆರೆ ತಾ. ಆದ ಇವರುಗಳ ಮಾಹಿತಿ ಮೇರೆಗೆ ನಾನು ಸಾರ್ವಜನಿಕ - ಪ್ರಕಟಣಾ ನೋಟೀಸ್ ಈ ಕೆಳಕಂಡಂತೆ ನೀಡುತ್ತಿದ್ದೇನೆ.

ನಮ್ಮ ಕಕ್ಷಿಗಾರರು ನೋಟೀಸ್‌ನಲ್ಲಿ ವಿವರಿಸಿರುವ ಷೆಡ್ಯೂಲ್ ಸ್ವತ್ತಿಗೆ ಮಾಲೀಕರಾಗಿ ಅನುಭವಿಸುತ್ತಾ ಬಂದಿರುತ್ತಾರೆ. ನಮ್ಮ ಕಕ್ಷಿಗಾರರಿಗೆ ಅವರ ತಾಯಿಯವರು ಜೀವಿತ ಕಾಲದಲ್ಲಿ ರಿಜಿಸ್ಟ್ರಾರ್ ವಿಲ್ ಬರೆಯಿಸಿ ಇಟ್ಟಿದ್ದು, ಸದರಿ ವಿಲ್ ಮೂಲಕ ಐಟಂ ನಂ. 1 ಮತ್ತು 2 ಸ್ವತ್ತುಗಳು ಮತ್ತು ಇನ್ನುಳಿದ ಐಟಂ ನಂಬರ್ 3 ರಿಂದ 6ರಲ್ಲಿ ತೋರಿಸಿರುವ ಸ್ವತ್ತುಗಳು ಪಾಲು ವಿಭಾಗ ಮೂಲಕ ನಮ್ಮ ಕಕ್ಷಿಗಾರರ ಮಾಲೀಕತ್ವಕ್ಕೆ ಬಂದಿರುತ್ತವೆ. ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತುಗಳನ್ನು ನಮ್ಮ ಕಕ್ಷಿಗಾರರು ಸಂಪೂರ್ಣ ಮಾಲೀಕರಾಗಿ ಅನುಭವಿಸುತ್ತಾ ಬಂದಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಬಗ್ಗೆ ನಮ್ಮ ಕಕ್ಷಿಗಾರರ ಸಹೋದರಿ ಶ್ರೀಮತಿ ಜ್ಯೋತಿ ಕೋಂ ಡಾ.ವಿಶ್ವನಾಥ್ ಇವರು ಪಾಲುವಿಭಾಗ ಕೋರಿ ದಾವಣಗೆರೆ ಸೀನಿಯರ್ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಹೂಡಿ, ಸಹೋದರ ಡಾ. ಜಿ.ಸಿ. ರಾಜೇಂದ್ರ ಇವರೊಂದಿಗೆ ಶಾಮೀಲ್ ಆಗಿ ಸದರಿ ಪ್ರಕರಣದಲ್ಲಿ ನ್ಯಾಯಾಲಯದಿಂದ ಆದೇಶ ಪಡೆದಿರುತ್ತಾರೆ. ಸದರಿ ಪ್ರಕರಣ ಒ.ಎಸ್. ನಂ. 213/2016ರಲ್ಲಿ ಮಾನ್ಯ ನ್ಯಾಯಾಲಯದಿಂದ ಆದೇಶ ಆಗಿರುತ್ತದೆ.

ಷೆಡ್ಯೂಲ್ ಸ್ವತ್ತಿನ ಬಗ್ಗೆ ಹಾಗೂ ನ್ಯಾಯಾಲಯದಲ್ಲಿ ಆಗಿರುವ ಆದೇಶವನ್ನು ಪ್ರಶ್ನಿಸಿ ನಮ್ಮ ಕಕ್ಷಿಗಾರರು ಮಾನ್ಯ ಸೀನಿಯರ್ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣವು ಒ.ಎಸ್. 7/2025ರಲ್ಲಿ ಮಾನ್ಯ ಸಿನಿಯರ್ ಸಿವಿಲ್ ಜಡ್ಜ್ ಹಾಗೂ ಸಿಜೆಎಂ ನ್ಯಾಯಾಲಯದಲ್ಲಿ ಹಾಲಿ ಚಾಲ್ತಿಯಲ್ಲಿರುತ್ತದೆ.

ವಿಷಯ ಹೀಗಿರುವಾಗ ನಮ್ಮ ಕಕ್ಷಿಗಾರರ ಸಹೋದರಿ ಶ್ರೀಮತಿ ಜ್ಯೋತಿ ಹಾಗೂ ಸಹೋದರ ಡಾ|| ರಾಜೇಂದ್ರ ಇವರುಗಳು ಷೆಡ್ಯೂಲ್ ಸ್ವತ್ತನ್ನು ಬೇರೆಯವರಿಗೆ ಪರಭಾರೆ ಮಾಡುವ ಹುನ್ನಾರ ನಡೆಸಿರುತ್ತಾರೆಂದು ನಮ್ಮ ಕಕ್ಷಿಗಾರರ ಗಮನಕ್ಕೆ ಬಂದಿರುತ್ತದೆ. ಕಾರಣ ನೋಟೀಸ್. ಷೆಡ್ಯೂಲ್ ಆಸ್ತಿಯ ಬಗ್ಗೆ ನಮ್ಮ ಕಕ್ಷಿಗಾರರ ಸಹೋದರ ಡಾ. ಜಿ.ಸಿ. ರಾಜೇಂದ್ರ ಹಾಗೂ ಶ್ರೀ ಜ್ಯೋತಿ ಕೋಂ ಡಾ. ವಿಶ್ವನಾಥ್ ಇವರೊಂದಿಗೆ ಸಾರ್ವಜನಿಕರು, ಹಣಕಾಸು ಸಂಸ್ಥೆಯವರು ಅಥವಾ ಬ್ಯಾಂಕ್‌ಗಳು ಯಾವುದೇ ರೀತಿ ವ್ಯವಹಾರ ನಡೆಸಬಾರದೆಂದು (ಅಂದರೆ ಕರಾರು, ಕ್ರಯಪತ್ರ, ಅಡಮಾನ, ದಾನಪತ್ರ): ಈ ನೋಟೀಸ್ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ. ಒಂದು ವೇಳೆ ಯಾರಾದರೂ ಯಾವುದೇ ರೀತಿ ವ್ಯವಹಾರ ಮಾಡಿದ್ದಲ್ಲಿ ಮುಂದೆ ಆಗುವ ಪರಿಣಾಮಗಳಿಗೆ ತಾವೇ ಬಾಧ್ಯಸ್ಥರು ತಿಳಿಯಿರಿ.

**ಷೆಡ್ಯೂಲ್ : 1.** ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ನರಗನಹಳ್ಳಿ ಗ್ರಾಮದಲ್ಲಿರುವ ಸರ್ವೇ ನಂ. 194/2ರಲ್ಲಿರುವ 2 ಎಕರೆ ವ್ಯವಸಾಯದ ಜಮೀನು. **2.** ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ನರಗನಹಳ್ಳಿ ಗ್ರಾಮದಲ್ಲಿರುವ ಸರ್ವೇ ನಂ. 195 ರಲ್ಲಿರುವ 2 ಎಕರೆ ವ್ಯವಸಾಯದ ಜಮೀನು. **3.** ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ನರಗನಹಳ್ಳಿ ಗ್ರಾಮದಲ್ಲಿರುವ ಸರ್ವೇ ನಂ. 207/3 ರಲ್ಲಿರುವ 1ಎಕರೆ 23 ಗುಂಟೆ ವ್ಯವಸಾಯದ ಜಮೀನು. **4.** ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ನರಗನಹಳ್ಳಿ ಗ್ರಾಮದಲ್ಲಿರುವ ಸರ್ವೇ ನಂ. 1/4 ರಲ್ಲಿರುವ ಅಳತೆ 0.8 ಗುಂಟೆ ವ್ಯವಸಾಯದ ಜಮೀನು. **5.** ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ನರಗನಹಳ್ಳಿ ಗ್ರಾಮದಲ್ಲಿರುವ ನಿವೇಶನ ಸಂಖ್ಯೆ / ಖಾನೇಷುಮಾರಿ ನಂ. 1, 2 ರಲ್ಲಿ ಅಳತೆ 60x150 ಅಡಿ ಜಾಗದಲ್ಲಿ ಕಟ್ಟಿಸಿರುವ ಆರ್.ಸಿ.ಸಿ. ಮನೆಗಳು. **6.** ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ ನರಗನಹಳ್ಳಿ ಗ್ರಾಮದಲ್ಲಿರುವ ನಿವೇಶನ ಸಂಖ್ಯೆ 5 ರಲ್ಲಿ ಅಳತೆ 60x100 ಸೊತ್ತು.

ಕಕ್ಷಿಗಾರರ ಸಹಿ

**ಎಸ್. ನಾಗರಾಜ್**
ಬಿ.ಕಾಂ. ಎಲ್.ಎಲ್.ಬಿ. ವಕೀಲರು

# ವಸತಿ ರಹಿತರ ಕಡೆಗಣಿಸಿದ ಸರ್ಕಾರ

## ಸಿಪಿಐ ಜಿಲ್ಲಾ ಮಂಡಳಿ ಕಾರ್ಯಾಗಾರದಲ್ಲಿ ಸಾತಿ ಸುಂದರೇಶ್



ದಾವಣಗೆರೆ, ಜ.13- ದೇಶದಲ್ಲಿ ಅನೇಕ ವರ್ಷಗಳಿಂದ ನಿವೇಶನ ಮತ್ತು ವಸತಿ ರಹಿತರ ಸಮಸ್ಯೆ ಸಮಸ್ಯೆಯಾಗಿಯೇ ಉಳಿದಿದೆ. ಭರವಸೆ ನೀಡಿ ಅಧಿಕಾರಕ್ಕೆ ಬಂದ ಯಾವ ಸರ್ಕಾರಗಳು ಕಾಳಜಿ ತೋರದೆ ಕಡೆಗಣಿಸುತ್ತಾ ಬಂದಿವೆ ಎಂದು ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್ ಆರೋಪಿಸಿದರು.

ನಗರದ ಕಾಂ. ಪಂಪಾಪತಿ ಭವನದ ಸಭಾಂಗಣದಲ್ಲಿ ಸಿಪಿಐ ಜಿಲ್ಲಾ ಮಂಡಳಿ ವತಿಯಿಂದ ಆಯೋಜಿಸಿದ್ದ ನಿವೇಶನ ಮತ್ತು ವಸತಿ ರಹಿತರ ಮಾಹಿತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ನಿವೇಶನ ಮತ್ತು ವಸತಿ ರಹಿತರನ್ನು ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ನಿವೇಶನ ಮತ್ತು ವಸತಿ ರಹಿತರನ್ನು ಜಾಗೃತಿಗೊಳಿಸಿ, ಆಯಾ ಸ್ಥಳೀಯ ಸಂಸ್ಥೆಗಳಲ್ಲಿ ನಿವೇಶನ ಮತ್ತು ವಸತಿ ರಹಿತರು ಅರ್ಜಿ ಸಲ್ಲಿಸಿ, ರಾಜೀವಗಾಂಧಿ ವಸತಿ ನಿಗಮದಲ್ಲಿ ನೋಂದಣಿ ಮಾಡಿಸಬೇಕು. ಅವರನ್ನು ಸಂಘಟಿಸುವ ಮೂಲಕ ಹೋರಾಟಕ್ಕೆ ಅಣಿಗೊಳಿಸಬೇಕಾದ ಅಗತ್ಯವಿದೆ ಎಂದರು.

ದಲಿತ ಆಂದೋಲನ ಸಂಘಟನೆಯ ರಾಜ್ಯಾಧ್ಯಕ್ಷ ಕೆ. ಎಸ್. ಜನಾರ್ದನ್ ಮಾತನಾಡಿ, ಗ್ರಾಮೀಣ ಮತ್ತು ಪಟ್ಟಣ, ಮಹಾನಗರಗಳ ವ್ಯಾಪ್ತಿಗಳ ಕೊಳಚೆ ಪ್ರದೇಶಗಳ ಕುಟುಂಬಗಳ ಜೀವನ ನಿರ್ವಹಣೆ ಶೋಚನೀಯ ಸ್ಥಿತಿ ತಲುಪಿದೆ ಎಂದು ಹೇಳಿದರು.

ನಿವೇಶನ ಮತ್ತು ವಸತಿ ರಹಿತರಿಗೆ ಪರ್ಯಾಯ ವ್ಯವಸ್ಥೆ ದೊರಕದ ಕಾರಣ ಅನಿವಾರ್ಯವಾಗಿ ತಮ್ಮ ಮಕ್ಕಳೊಂದಿಗಿನ ಬದುಕಿನ ಬಂಡಿ ಹೀನಾಯ ಸ್ಥಿತಿ ತಲುಪಿದ್ದು, ಈ ನಿಟ್ಟಿನಲ್ಲಿ ವಸತಿ ರಹಿತ ಜನರನ್ನು ಗುರುತಿಸಿ ಹೋರಾಟಗಳ ಮೂಲಕ ನ್ಯಾಯ ಕೊಡಿಸಲು ಕಾರ್ಯಕರ್ತರು ಮುಂದಾಗಬೇಕಿದೆ ಎಂದು ತಿಳಿಸಿದರು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಹ ಕಾರ್ಯದರ್ಶಿ ಹೆಚ್.ಜಿ.ಉಮೇಶ್ ಆವರಗೆರೆ, ಖಜಾಂಚಿ ಮಹಮ್ಮದ್ ರಫೀಕ್, ಕಾರ್ಮಿಕ ಮುಖಂಡರಾದ ಹೆಚ್.ಎಂ. ಸಂತೋಷ್, ರಮೇಶ್ ದಾಸರ್ ಮತ್ತಿತರರು ಭಾಗವಹಿಸಿದ್ದರು.

# ಪೋಷಕರು ಮಕ್ಕಳಿಗೆ ದೇಶದ ಸಂಸ್ಕೃತಿ, ಕಲೆಗಳನ್ನು ಚಿಕ್ಕಂದಿನಿಂದಲೇ ಕಲಿಸಬೇಕು : ಡಾ. ರೂಪಶ್ರೀ ಕರೆ

ದಾವಣಗೆರೆ, ಜ. 13- ಇಂದಿನ ಮಕ್ಕಳಿಗೆ ಮನೆಯಲ್ಲಿ ಪೋಷಕರು ಕಲಿಸುವ ಸಂಸ್ಕೃತಿಯನ್ನು ಮಕ್ಕಳು ಮುಂದುವರೆಸಿಕೊಂಡು ಹೋದರೆ ಮಾತ್ರ ತಿಳಿದುಕೊಳ್ಳಲು ಸಾಧ್ಯ ಎಂದು ಹಿರಿಯ ದಂತ ವೈದ್ಯರೂ, ಸಾಹಿತಿಗಳೂ ಆದ ಡಾ. ರೂಪಶ್ರೀ ಶಶಿಕಾಂತ್ ಸಮಾಜಕ್ಕೆ ಸಲಹೆ ನೀಡಿದರು.

ನಗರದ ಅಶ್ವತ್ಥಪುರ ದೇಶಸ್ಥ ಬ್ರಾಹ್ಮಣ ಸಮಾಜದ 12ನೇ ವರ್ಷದ ವಾರ್ಷಿಕೋತ್ಸವ 'ಚೈತನ್ಯ ಸಾಂಸ್ಕೃತಿಕ ಸೌರಭ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ವಿದ್ಯಾಭ್ಯಾಸದ ಜೊತೆಗೆ ಒಳ್ಳೆಯ ವಿಷಯಗಳನ್ನು ತಿಳಿದುಕೊಳ್ಳಬೇಕು ಎಂದು ನುಡಿದರು.

ಅಶ್ವತ್ಥಪುರ ದೇಶಸ್ಥ ಬ್ರಾಹ್ಮಣ ಸಮಾಜದ ಅಧ್ಯಕ್ಷ ಡಾ. ಪಿ.ಎಸ್. ಸುರೇಶ್ ಬಾಬು ಮಾತನಾಡಿ, ಸಂಸ್ಥೆ ನಡೆದು ಬಂದ ದಾರಿ, ಸಂಸ್ಥೆಯಿಂದ ನಡೆಯುವ ಕಾರ್ಯ ಚಟುವಟಿಕೆಗಳು ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಸಂಸ್ಥೆಯಿಂದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಹಿರಿಯ ಶಿಕ್ಷಕರಿಗೆ ಗುರುವಂದನೆ, ಸಮಾಜದ ಏಳಿಗೆಗಾಗಿ ಆರೋಗ್ಯ ನಿಧಿಯನ್ನು ಸ್ಥಾಪಿಸಿದ್ದು, ವೈದ್ಯಕೀಯ ಸೌಲಭ್ಯವನ್ನು ಪಡೆಯಲು ಈ ನಿಧಿ ಉಪಯೋಗವಾಗಲಿದೆ ಎಂದು ತಿಳಿಸಿದರು.

ಬೆಳಗಾವಿಯ ಪ್ರಸಿದ್ಧ ಹಿಂದೂಸ್ಥಾನಿ ಗಾಯಕಿ, ಸಪ್ತಸ್ವರ ಸಂಗೀತ ಶಾಲೆಯ ಶಿಕ್ಷಕರಾದ ಶ್ರೀಮತಿ ನಿರ್ಮಲ ಪ್ರಕಾಶ್ ಮಾತನಾಡಿ, ಸಂಗೀತ ಕಲಿಯಲು ವಯಸ್ಸಿನ ಇತಿ ಮಿತಿ ಇರುವುದಿಲ್ಲ, ಆದರೆ ಕಲಿಯಲು ಆಸಕ್ತಿಯನ್ನು ಬೆಳೆಸಿಕೊಳ್ಳ ಬೇಕು ಆಗ ಮಾತ್ರ ಗುರಿ ಮುಟ್ಟಲು ಸಾಧ್ಯ ಎಂದು ತಿಳಿಸಿದರು.

ಸಮಾರಂಭದ ವೇದಿಕೆ ಮೇಲೆ ಸಂಸ್ಥೆ ಕಾರ್ಯದರ್ಶಿ ಎಲ್. ವಿ. ಸುಬ್ರಮಣ್ಯ, ಸಾಂಸ್ಕೃತಿಕ ಸಮಿತಿಯ ಮುಖ್ಯಸ್ಥ ಬಿ.ಟಿ ಚಂದ್ರಶೇಖರ್, ಉಪಾಧ್ಯಕ್ಷ ಪಿ.ಎಲ್.ಶಂಕರ್‌ರಾವ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.




**ಅಶ್ವತ್ಥಪುರ ದೇಶಸ್ಥ ಬ್ರಾಹ್ಮಣ ಸಮಾಜದ ಕಾರ್ಯಕ್ರಮ**

ಮಹಿಳಾ ಮಂಡಳಿಯವರು ಪ್ರಾರ್ಥಿಸಿದರು. ಪ್ರಸನ್ನ ಸೀಮೆಕಳ ಸ್ವಾಗತಿಸಿದರು, ವಿಜಯಕುಮಾರ್ ಕುಂಚಿಬೆಟ್ಟು ವಂದಿಸಿದರು. ಸಹ ಕಾರ್ಯದರ್ಶಿಯೂ ಆದ ರಕ್ತದಾನಿ ಅನಿಲ್ ಬಾರೆಂಗಳ್ ಕಾರ್ಯಕ್ರಮ ನಿರೂಪಿಸಿದರು.

ಈ ಸಂದರ್ಭದಲ್ಲಿ ಹಿರಿಯ ದಂತ ವೈದ್ಯರೂ ಆದ ತಾಲ್ಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಎಂ.ಸಿ. ಶಶಿಕಾಂತ್, ಮಾಜಿ ಕಾರ್ಯದರ್ಶಿ ಸತ್ಯನಾರಾಯಣ ಎಸ್.ಪಿ. ಮತ್ತು ಇತರರು ಉಪಸ್ಥಿತರಿದ್ದರು.

# ಇಂದು ತಪೋಕ್ಷೇತ್ರ ಕಣ್ವಕುಪ್ಪೆಯಲ್ಲಿ ರಥೋತ್ಸವ



ಜಗಳೂರು ತಾಲ್ಲೂಕು ತಪೋಕ್ಷೇತ್ರ ಕಣ್ವಕುಪ್ಪೆ ಗವಿಮಠದಲ್ಲಿ ಮಕರ ಸಂಕ್ರಾತಿಯಂದು ಮಹಾ ರಥೋತ್ಸವವು ಇಂದು ಜರುಗಲಿದೆ. ಮಕರ ಸಂಕ್ರಾತಿಯ ರಥೋತ್ಸವದ ಸಾನ್ನಿಧ್ಯವನ್ನು ತಪೋಕ್ಷೇತ್ರ ಗವಿಮಠದ ಪಟ್ಟಾಧ್ಯಕ್ಷರಾದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ವಹಿಸುವರು.

ಕಾರ್ಯಕ್ರಮದಲ್ಲಿ ನಾಡಿನ ವಿವಿಧ ಮಠಗಳ ಶ್ರೀಗಳು, ನಾಡಿನ ಸಾಮಾಜದ ಗಣ್ಯರು, ರಾಜಕೀಯ ಮುತ್ಸದ್ದಿಗಳು, ಕಲಾವಿದರು, ವಿದ್ಯಾಂಸರು ಮತ್ತು ಮತ್ತಿತರೆ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಇಂದು ಉದಯ ಬ್ರಾಹ್ಮೀ ಮುಹೂರ್ತದಲ್ಲಿ ಧನುರ್ಮಾಸ ಪೂಜಾ ಮಂಗಳ, ಮಕರ ಸಂಕ್ರಾಂತಿ ವಿಶೇಷ ಪೂಜಾ ಹಾಗೂ ಗುರು ಶಾಂತಲಿಂಗೇಶ್ವರ ರಥೋತ್ಸವ, ಬ್ರಾಹ್ಮೀ ಮುಹೂರ್ತದಲ್ಲಿ ಗಂಗಾ ಪೂಜೆ, ಪಂಚಾಚಾರ್ಯ ಧ್ವಜಾ ರೋಹಣ ನೆರವೇರಿಸಲಾಗುವುದು.

ಲಿಂ.ಕತೃ ಗದ್ದುಗೆಗಳಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾಮಂಗಲ ಮತ್ತು ಪ್ರಸಾದ ವಿನಿಯೋಗ, ಶಾಂತಿ ಹೋಮಗಳನ್ನು ಮಾಡಲಾಗುವುದು. ಬೆಳಗಿನ ಜಾವ 11 ಘಂಟೆಯಿಂದ ಜಾತ್ರಾ ಮಹೋತ್ಸವದ ವಿಧಿ ವಿಧಾನಗಳು ಹಾಗೂ ಬೆಳಗ್ಗೆ 10 ರಿಂದ ಸಾರ್ವಜನಿಕರಿಗೆ ಸ್ಪಟಿಕ ಲಿಂಗ ದರ್ಶನಕ್ಕೆ ಅವಕಾಶ ನೀಡಲಾಗುವುದು. ಮಧ್ಯಾಹ್ನ 2 ಘಂಟೆಗೆ ಮಕರ ಸಂಕ್ರಾತಿ ಧರ್ಮ ಸಂದೇಶ, ಸಂಜೆ 3:28 ಕ್ಕೆ ಶ್ರೀ ಮಠದ ಕರ್ತೃ ಶ್ರೀ ಗವಿಶಾಂತಲಿಂಗೇಶ್ವರರ ಮಹಾರಥೋತ್ಸವ, ಮತ್ತು ಉತ್ತರಾಯಣ ಪುಣ್ಯ ಪರ್ವಕಾಲದಲ್ಲಿ ದರ್ಶನದ ಜೊತೆಗೆ ಆಶೀರ್ವಾದ ನೀಡಲಾಗುವುದು ಎಂದು ತಿಳಿಸಿದರು.

ರಥೋತ್ಸವಕ್ಕೆ ಸುತ್ತ-ಮುತ್ತಲಿನ ಜಿಲ್ಲೆಯಲ್ಲದೆ ನೆರೆ ರಾಜ್ಯಗಳಿಂದಲೂ ಸಾವಿರಾರು ಭಕ್ತರು ಬರುತ್ತಾರೆ. ಗವಿಮಠಕ್ಕೆ ಹೋಗಲು ಜಗಳೂರಿನಿಂದ ಬಸ್ ಆಟೋ ವ್ಯವಸ್ಥೆ ಇರುತ್ತದೆ. ಭಕ್ತಾದಿಗಳು ರೊಟ್ಟಿ, ಪುಡಿಚಟ್ನಿಗಳನ್ನು ತರಲು ಸರ್ವರಿಗೂ ಮುಕ್ತ ಅವಕಾಶವಿರುತ್ತದೆ.

# ಹೊನ್ನಾಳಿ ಶಿವ ಸಹಕಾರ ಸಂಘದ ಅಧ್ಯಕ್ಷರಾಗಿ ಕ್ಯಾಸಿನಕೆರೆ ಶಂಕರಗೌಡ



ಹೊನ್ನಾಳಿ, ಜ. 13- ಹೊನ್ನಾಳಿ ಶಿವ ಸಹಕಾರ ಸಂಘದ ಅಧ್ಯಕ್ಷರಾಗಿ ಕ್ಯಾಸಿನಕೆರೆ ಎ. ಸಿ. ಶಂಕರಗೌಡ ಪಾಟೀಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿ ನವೀನಕುಮಾರ್ ತಿಳಿಸಿದ್ದಾರೆ. ಶಿವಕುಮಾರ್ ಅವರಿಂದ ತೆರವಾದ ಸ್ಥಾನಕ್ಕೆ ಶಂಕರಗೌಡ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷರಾಗಿ ಕೂಲಂಬಿ ಬಸವರಾಜ್, ನಿರ್ದೇಶಕರಾದ ಹೊನ್ನಾಳಿ ಶೈಲೇಶ್, ತರಗನಹಳ್ಳಿ ಮಂಜುಳಾ, ರಾಮೇಶ್ವರ ಚಂದ್ರಪ್ಪ, ಕಮ್ಮಾರಗಟ್ಟೆ ಶಿವಕುಮಾರ್, ಸೂರಗೊಂಡನಕೊಪ್ಪದ ಕೆಂಚಪ್ಪ, ಕುಂದೂರು ಬಸವನಗೌಡ, ಅರಬಗಟ್ಟೆ ಕರಿಬಸಪ್ಪ, ಆರುಂಡಿ ಸತೀಶ್, ದೊಡ್ಡೆತ್ತಿನಹಳ್ಳಿ ಚನ್ನವೀರಪ್ಪ, ಕಡದಕಟ್ಟೆ ಯಶೋಧಮ್ಮ, ವಿಜಯಪುರ ಕೃಷ್ಣಾನಾಯ್ಕ, ನೇರಲಗುಂಡಿ ಚೇತನ, ಕಾರ್ಯದರ್ಶಿ ರುದ್ರೇಶ್ ಇದ್ದರು.

# ನಾಳೆ ಕೊಂಡಜ್ಜಿಯಲ್ಲಿ ಅಯ್ಯಪ್ಪ ಸ್ವಾಮಿ ಪಡಿಪೂಜೆ, ಅನ್ನ ಸಂತರ್ಪಣೆ



ದಾವಣಗೆರೆ, ಜ. 13- ಕೊಂಡಜ್ಜಿಯ ಅಯ್ಯಪ್ಪಸ್ವಾಮಿ ಸೇವಾ ಸಮಿತಿ ವತಿಯಿಂದ 17ನೇ ವರ್ಷದ ಶಬರಿಮಲೈ ಯಾತ್ರೆ ಪ್ರಯುಕ್ತ ಅಯ್ಯಪ್ಪ ಸ್ವಾಮಿ ಪಡಿ ಪೂಜೆ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 15ರ ಬುಧವಾರ ಸಂಜೆ 7 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದಿಂದ ಅಯ್ಯಪ್ಪ ಸ್ವಾಮಿ ಮೂರ್ತಿಯನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು. ನಂತರ ಹೂವಿನ ಅಲಂಕಾರದೊಂದಿಗೆ ಪಡಿ ಪೂಜೆ ನಂತರ ಅನ್ನ ಸಂತರ್ಪಣೆ ಹಾಗೂ ಪೂಜೆಯ ನಂತರ ಗ್ರಾಮದ ಮರುಳಸಿದ್ದೇಶ್ವರ ಭಜನಾ ಮಂಡಳಿ ವತಿಯಿಂದ ಭಜನಾ ಕಾರ್ಯಕ್ರಮ ಆಯೋಜಿಸಲಾಗಿದೆ. ದಿನಾಂಕ 16ರ ಗುರುವಾರ ಶಬರಿಮಲೈ ಯಾತ್ರೆ ಪ್ರಾರಂಭವಾಗಲಿದೆ.

# ನಗರದಲ್ಲಿಂದು ಅಯ್ಯಪ್ಪ ಸ್ವಾಮಿ ಪಡಿ ಪೂಜೆ



ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆಯ ಬಕ್ಕೇಶ್ವರ ಶಾಲೆ ಹತ್ತಿರದ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಮಕರ ಸಂಕ್ರಾಂತಿ ಪ್ರಯುಕ್ತ ಶ್ರೀ ಸ್ವಾಮಿಗೆ ಇಂದು ಬೆಳಿಗ್ಗೆ ಪಂಚಾಮೃತ ಅಭಿಷೇಕ, ಸಂಜೆ 7 ಗಂಟೆಗೆ ಪಡಿಪೂಜೆ ಮತ್ತು ಪ್ರಸಾದ ವಿನಿಯೋಗವಿರುತ್ತದೆ.


## ಬೇಕಾಗಿದ್ದಾರೆ

**Auto CAD, Steel Design Work**

ಅನುಭವವುಳ್ಳ ಹಾಗೂ ಪ್ಲಂಬಿಂಗ್ ಕಾಮಗಾರಿ ಹಾಗೂ ಎಲೆಕ್ಟ್ರಿಕ್ ಕಾಮಗಾರಿಯ ಬಗ್ಗೆ ನುರಿತ ಸಿವಿಲ್ ಇಂಜಿನಿಯರ್ ದಾವಣಗೆರೆಯ ನಮ್ಮ ಕಛೇರಿಯಲ್ಲಿ ಕೆಲಸ ಮಾಡಲು ಆಸಕ್ತಿ ಉಳ್ಳವರು ಬೇಕಾಗಿದ್ದಾರೆ.

ಸಂದರ್ಶನ ಸಮಯ :

ದಿನಾಂಕ : 14.01.2025ರ ಮಧ್ಯಾಹ್ನ 3 ಗಂಟೆಗೆ ರಿಂಗ್ ರಸ್ತೆ, ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್, ಶಾರದಾಂಬ ದೇವಸ್ಥಾನದ ಹತ್ತಿರ, ದಾವಣಗೆರೆ ಇಲ್ಲಿ ಸಂದರ್ಶನವಿರುತ್ತದೆ. ಆಸಕ್ತ ಇಂಜಿನಿಯರ್‌ಗಳು ಸಂದರ್ಶನಕ್ಕೆ ಹಾಜರಾಗತಕ್ಕದ್ದು.

ಮೊ : 73535 07622, 80959 62290, 63623 96731

## ಸುಗ್ಗಿ ಹಬ್ಬ 'ಸಂಕ್ರಾಂತಿ' ಶುಭಾಶಯಗಳು



ಸರ್ವರಿಗೂ ಸುಗ್ಗಿ ಹಬ್ಬ ಮಕರ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು...

ಪರಶುರಾಮಪ್ಪ ಪೂಜಾರ್
ಜಿಲ್ಲಾ ಪತ್ರ ಬರಹಗಾರರು
ಉಪ ನೋಂದಣಿ ಕಛೇರಿ ಆವರಣ,
ದಾವಣಗೆರೆ. ಮೊ. : 89703 96509

## 'ಮಕರ ಸಂಕ್ರಾಂತಿ' ಶುಭಾಶಯಗಳು



ನಮ್ಮೆಲ್ಲಾ ಆತ್ಮೀಯ ಬಂಧು-ಮಿತ್ರರಿಗೆ 'ಸಂಕ್ರಾಂತಿ' ಹಬ್ಬದ ಶುಭಾಶಯಗಳು...

ಡಿ. ಕೆ. ಸಂಗಮೇಶ್ ಎಲಿಗಾರ್
ಪತ್ರ ಬರಹಗಾರರು,
ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ,
ಪಿ. ಬಿ. ರಸ್ತೆ, ದಾವಣಗೆರೆ. ಮೊ. : 98440 65710


# 'ಹೇ ನೀನ್ಯಾರು.. ನೀನ್ಯಾಕೆ ಸ್ವಾಮೀಜಿ ಪಕ್ಕ ಕೂತಿದೀಯಾ.. ಈ ಕಡೆ ಬಾ'



**ವಿಜಯನಗರ ಜಿಲ್ಲಾಧಿಕಾರಿ ದಿವಾಕರ್‌ಗೆ ಗದರಿದ ಮುಖ್ಯಮಂತ್ರಿ ಸಿದ್ಧರಾಮಯ್ಯ**

ವಿಜಯನಗರ, ಜ.13- 'ಹೇ.. ನೀನ್ಯಾರು.. ನೀನ್ಯಾಕೆ ಸ್ವಾಮೀಜಿ ಪಕ್ಕ ಕೂತಿದೀಯಾ.. ಈ ಕಡೆ ಬಾ' ಎಂದು ವಿಜಯನಗರ ಜಿಲ್ಲೆಯ ಜಿಲ್ಲಾಧಿಕಾರಿ ದಿವಾಕರ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗದರಿದ ಘಟನೆ ಭಾನುವಾರ ನಡೆದಿದೆ.

ವಿಜಯನಗರ ಜಿಲ್ಲೆಯ ಬಂಡಿಹಳ್ಳಿ ಗ್ರಾಮದಲ್ಲಿ ಸರ್ವಧರ್ಮ ಸಾಮೂಹಿಕ ಮದುವೆ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಈ ವೇಳೆ ಭಾಷಣ ಮಾಡುವಾಗ ಜಿಲ್ಲಾಧಿಕಾರಿ ದಿವಾಕರ್ ಮೇಲೆ ಗರಂ ಆದ ಘಟನೆ ನಡೆಯಿತು.

ದಿವಾಕರ್ ಅವರು ವೇದಿಕೆ ಮೇಲಿದ್ದ ಸ್ವಾಮೀಜಿ ಪಕ್ಕದಲ್ಲಿಯೇ ಕುಳಿತುಕೊಂಡಿದ್ದರು. ಇದನ್ನು ಗಮನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ , ನೀನು ಯಾರು? ಎಂದು ಕೇಳಿದರು.. ಅದಕ್ಕೆ ಜಿಲ್ಲಾಧಿಕಾರಿ, ನಾನು ವಿಜಯನಗರ ಜಿಲ್ಲೆಯ ಡಿಸಿ ಸರ್ ಎಂದು ಉತ್ತರಿಸಿದರು. ಹೇ ನೀನು ಸ್ವಾಮೀಜಿ ಪಕ್ಕ ಯಾಕೆ ಕುಳಿತುಕೊಂಡಿದ್ದೀಯಾ? ಆ ಕಡೆ ಕುಳಿತುಕೊ ಹೋಗು ಅಂತಾ ಸಿದ್ದರಾಮಯ್ಯ ಜಿಲ್ಲಾಧಿಕಾರಿಗೆ ಹೇಳಿದರು.

# ನೀಲಮ್ಮನ ತೋಟದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಅಯ್ಯಪ್ಪಸ್ವಾಮಿ ಪಡಿಪೂಜೆ



ನೀಲಮ್ಮನ ತೋಟದ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ಇಂದು ಸಂಜೆ 7 ಗಂಟೆಗೆ ಅಯ್ಯಪ್ಪ ಸ್ವಾಮಿಯ ಪಡಿ ಪೂಜೆ ಹಾಗೂ ಭಜನಾ ಕಾರ್ಯಕ್ರಮ ನಡೆಯಲಿದೆ.

ನಂತರ ಎಲ್ಲ ಭಕ್ತಾದಿಗಳಿಗೆ ಅನ್ನ ಪ್ರಸಾದ ವಿರುತ್ತದೆ ಎಂದು ಅಯ್ಯಪ್ಪ ಸ್ವಾಮಿ ಭಕ್ತ ಮಂಡಳಿಯವರು ತಿಳಿಸಿದ್ದಾರೆ.

# ಜಿಲ್ಲಾಡಳಿತದಿಂದ ನಗರದಲ್ಲಿ ಇಂದು ಶ್ರೀ ಶಿವಯೋಗಿ ಸಿದ್ದರಾಮ ಜಯಂತಿ

ದಾವಣಗೆರೆ ಜಿಲ್ಲಾಡಳಿತ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಶ್ರೀ ಶಿವಯೋಗಿ ಸಿದ್ದರಾಮ ಜಯಂತಿಯನ್ನು ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

## ಚಿರಸ್ಮರಣೆ



ಜನನ: 12.03.1962

ಮರಣ : 14.01.2016

**ಶ್ರೀಮತಿ ಆರ್.ಎಲ್. ವಿಶಾಲಾಕ್ಷಿ**

ನಿಮ್ಮ ದೈವ ಭಕ್ತಿಯಿಂದಾಗಿ ನಿಮ್ಮನ್ನು ಬೇಗನೇ
ಆ ಭಗವಂತನು ತನ್ನ ಸನ್ನಿಧಿಗೆ ಕರೆದುಕೊಂಡ.
ಈಗಲೂ ನಮ್ಮೊಂದಿಗೆ ಇದ್ದೀರೆಂದು ನಮ್ಮ ಭಾವನೆ.

ಸದಾ ನಿಮ್ಮ ಪುಣ್ಯ ಸ್ಮರಣೆಯಲ್ಲಿ :

ಪತಿ: ಕೆ.ಬಿ.ನಂಜುಂಡಪ್ಪ,
ನಿವೃತ್ತ ಸೀನಿಯರ್ ಮ್ಯಾನೇಜರ್, ಕೆನರಾ ಬ್ಯಾಂಕ್
ಮಕ್ಕಳು: ಕೆ.ಎನ್.ಶ್ರೀ ಹರ್ಷ ಕೆ.ಎನ್. ನಿತಿನ್
ಸೊಸೆಯಂದಿರು :ಪಿ.ಜಿ. ಸ್ವಾತಿ, ಎಸ್. ಸ್ಫೂರ್ತಿ
ಮೊಮ್ಮಗ: ಧನ್ವಿಕ್, ಮೊಮ್ಮಗಳು : ಅದ್ರಿತಿ ದಾವಣಗೆರೆ.
ದ್ಯಾಮಜ್ಜನ ವಂಶಸ್ಥರು, ಕ್ಯಾತನಹಳ್ಳಿ. ಅರಸೀಕೆರೆ ತಾಲ್ಲೂಕು.
ಲಿಂಗೈಕ್ಯರ ಸಹೋದರ-ಸಹೋದರಿಯರು ಹಾಗೂ ಬಂಧು-ಮಿತ್ರರು.


## ಹಾರ್ದಿಕ ಅಭಿನಂದನೆಗಳು



ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾಗಿರುವ
ಮಹಾನಗರ ಪಾಲಿಕೆಯ ಮಾಜಿ ಮೇಯರ್ ಹಾಗೂ
ವಿಶ್ವವಿಜೇತ ಸ್ವಾಮಿ ವಿವೇಕಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ
ನಿಯಮಿತದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್
ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ರುದ್ರಗೌಡ,
ಅಧ್ಯಕ್ಷರು, ಶ್ರೀ ಆಂಜನೇಯ ಸೌಹಾರ್ದ ಸಹಕಾರ ಸಂಘ ನಿ., ಕುಕ್ಕವಾಡ.

ಇವರಿಗೆ ಹಾರ್ದಿಕ ಅಭಿನಂದನೆಗಳು.

ವಿಶ್ವ ವಿಜೇತ ಸ್ವಾಮಿ ವಿವೇಕಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,

ಶ್ರೀ ರಾಜಶೇಖರ್ ಕೆ.ಎನ್., ಉಪಾಧ್ಯಕ್ಷರು

ನಿರ್ದೇಶಕರುಗಳು :

• ಶ್ರೀ ಸಂತೋಷ್‌ಕುಮಾರ್ ಹೆಚ್.ಎಂ. • ಶ್ರೀ ರಘುನಂದನ್ ಜೆ. ಅಂಬರ್‌ಕರ್ • ಶ್ರೀ ಶಶಿಕಿರಣ್ ಎ.ಹೆಚ್. • ಶ್ರೀ ಮಹೇಶ್ ಶೆಟ್ಟಿ • ಶ್ರೀ ಸಂಜಯ್ ಆರ್. ರೇವಣಕರ್ • ಶ್ರೀ ಬಸವರಾಜ್ ಜೆ.ಸಿ. • ಶ್ರೀ ಪ್ರಕಾಶ್ ಎಂ. • ಶ್ರೀ ಆಂಜನೇಯ ಪಿ.ಹೆಚ್. • ಶ್ರೀಮತಿ ಶ್ವೇತಾ ಎಂ. • ಶ್ರೀಮತಿ ಚೇತನ ಬಸವರಾಜ್ • ಶ್ರೀ ಗಣೇಶ ಕಿರಣ್‌ಕಿಣಿ • ಶ್ರೀ ಮಲ್ಲಿಕಾರ್ಜುನ್ ಕೆ.ಆರ್.
• ಶ್ರೀ ಎಂ.ಎಂ. ಮಂಜುನಾಥಯ್ಯ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
• ಶ್ರೀ ಮಂಜುನಾಥ ಎಸ್.ಆರ್., ಪಿಗ್ಮಿ ಸಂಗ್ರಹಕಾರರು


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas